# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:197 • ನೋಂದಣಿ ಸಂ.:KARKAN27911 • ವಿಜಯನಗರ • 30.12.2023 • ಶನಿವಾರ • ಪುಟ:04 • ಬೆಲೆ:2

Volume:01 • Issue:197 • Reg.No:KARKAN27911 • VIJAYANAGARA • 30.12.2023 • Saturday • Page:04 • Rs:2






**ಹೊಲ, ಗೋಡನ್ ಬಾಡಿಗೆಗೆ/ಲೀಸ್‌ಗೆ ಲಭ್ಯ**

ಹೊಸಪೇಟೆ ತಾಲೂಕಿನ ನಾಗೇನಹಳ್ಳಿಯಲ್ಲಿ ಬೋರ್‌ವೆಲ್ ನೀರು ಸಹಿತ 2 ಎಕರೆ ಹೊಲ ಮತ್ತು 25X60 ಚ.ಅಡಿ. 15 ಅಡಿ ಎತ್ತರ ಇರುವ ಗೋಡನ್ ಬಾಡಿಗೆ / ಲೀಸ್ ಕೊಡಲಾಗುವುದು. ಆಸಕ್ತರು ಸಂಪರ್ಕಿಸಿ.

**9448493553**


# 62 ಸಾವಿರ ಮಕ್ಕಳು ಎಲ್ಲಿದ್ದಾರೆ ? ವರದಿ ನೀಡಿ

## ಮಕ್ಕಳು ಶಾಲೆಯಿಂದ ಹೊರಗುಳಿಯುವಂತಿಲ್ಲ | ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ ಶಶಿಧರ ಕೋಸಂಬೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಸ್ಯಾಟ್ಸ್ (ಸ್ಟುಡೆಂಟ್ ಟ್ರ್ಯಾಕಿಂಗ್ ಸಿಸ್ಟಮ್)ನಲ್ಲಿ ವಿಜಯನಗರ ಜಿಲ್ಲೆ ಸೇರಿದಂತೆ ಕಲ್ಯಾಣ ಕರ್ನಾಟಕದ 62 ಸಾವಿರ ಮಕ್ಕಳ ಮಾಹಿತಿಯೇ ಸಿಗುತ್ತಿಲ್ಲ. ಆ ಮಕ್ಕಳು ಎಲ್ಲಿದ್ದಾರೆ ಎಂದು ರಾಜ್ಯ ಮಕ್ಕಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಕಳವಳ ವ್ಯಕ್ತಪಡಿಸಿದರು.

ಹೊಸಪೇಟೆಯ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಗ್ಗೆ ವರದಿ ನೀಡುವಂತೆ ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಒಂದು ವರ್ಷದಲ್ಲಿ 54 ಮಕ್ಕಳು ಪೋಕ್ಸೋ, ಚೈಲ್ಡ್ ಟ್ರಾಫಿಕ್ಕಿಂಗ್ 4, 20 ಕಾಣೆಯಾದ ಪ್ರಕರಣಗಳು, 2 ಭಿಕ್ಷಾಟನೆ ಪ್ರಕರಣಗಳು ದಾಖಲಾಗಿದ್ದು, ವಿವಿಧ ಹಂತದಲ್ಲಿ ವಿಚಾರಣೆ ಮುಂದುವರಿದಿದೆ. ಜಿಲ್ಲೆಯಲ್ಲಿ ಒಟ್ಟು 21122 ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಪೈಕಿ 2142 ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಲ್ಲ. ಅವರಿಗೆ ಪರೀಕ್ಷೆ ಬರೆಯಲು ಅನುವು ಮಾಡಿಕೊಡಬೇಕು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ.

ಜಿಲ್ಲೆಯಲ್ಲಿ 21,122 ವಿದ್ಯಾರ್ಥಿಗಳು ಹತ್ತನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಈ ಭಾರಿಯ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಾಗಿ ಇಲ್ಲಿವರೆಗೆ ನೋಂದಣಿ ಮಾಡದಿರುವ 2242 ಮಕ್ಕಳು ಬಾಕಿ ಉಳಿದಿದ್ದಾರೆ. ನಿನ್ನೆಯ ಭೇಟಿ ಸಂದರ್ಭದಲ್ಲಿಹೂವಿನಹಡಗಲಿಯ ಶಾಲೆಯೊಂದರಲ್ಲಿ ದಾಖಲಾದ 731 ವಿದ್ಯಾರ್ಥಿಗಳಲ್ಲಿ ಪೈಕಿ 181 ಮಕ್ಕಳು ಗೈರು ಹಾಜರಾಗಿದ್ದಾರೆ. ಈ ಮಕ್ಕಳು ಬೇರೆ ಶಾಲೆಗಳಲ್ಲಿ ದಾಖಲಾಗಿದ್ದಾರೆ ಅಥವಾ ಶಾಲೆ ಬಿಟ್ಟು ಹೋಗಿದ್ದಾರೆ ಎಂಬುವುದರ ಕುರಿತು ಡಿಡಿಪಿಐ ಹಾಗೂ ಸಂಬಂಧಪಟ್ಟ ಬಿಇಓ ಅವರು ಶಾಲೆಗೆ ಭೇಟಿ ನೀಡಿ ಆಯೋಗಕ್ಕೆ ಸೂಕ್ತ ಮಾಹಿತಿಯನ್ನು ಸಲ್ಲಿಸಬೇಕು. ಅರ್ಹ ಮಕ್ಕಳು ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಿಂದ ವಂಚಿತವಾಗಬಾರದು ಮತ್ತು ಶಾಲೆಯಿಂದ ಯಾವುದೇ ಮಕ್ಕಳು ಹೊರಗುಳಿಯದಂತೆ ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳು ತ್ವರಿತವಾಗಿ ಕ್ರಮ ಕೈಗೊಳ್ಳಬೇಕು.

ಹರಪನಹಳ್ಳಿಯ ವಸತಿ ಶಾಲೆಯೊಂದರಲ್ಲಿ ಮಕ್ಕಳಿಗೆ ವಾರಕ್ಕೆ ಒಂದು ದಿನ ಒಂದೇ ಚಪಾತಿ ನೀಡಲಾಗುತ್ತಿದೆ. ಅಲ್ಲಿನ ವಿದ್ಯಾರ್ಥಿಗಳಿಗೆ ಸಮರ್ಪಕ ಊಟ ಒದಗಿಸುತ್ತಿಲ್ಲ. ಹೂವಿನ ಹಡಗಲಿಯ ಮೈನಾರಿಟಿ ವಿದ್ಯಾರ್ಥಿ ನಿಲಯದಲ್ಲಿ ಶೌಚಾಲಯವಿಲ್ಲದೇ, ಮಕ್ಕಳು ನಿತ್ಯ ಬಯಲಿಗೆ ತೆರಳುತ್ತಿದ್ದಾರೆ. ಅಲ್ಲಿನ ವಾರ್ಡನ್ ಕೂಡ ನಿತ್ಯ ಕರ್ತವ್ಯಕ್ಕೆ ಹಾಜರಾಗುತ್ತಿಲ್ಲ ಎಂದು ವಿವಿಧ ಇಲಾಖೆಗಳ ಮೇಲಾಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಐದು ಸರ್ಕಾರಿ ಸೇರಿದಂತೆ 70 ಸ್ಕ್ಯಾನ್ ಸೆಂಟರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಭ್ರೂಣ ಹತ್ಯೆ ಪ್ರಕರಣಗಳ ಬಗ್ಗೆ ಅನಾಮಧೇಯ ವ್ಯಕ್ತಿಗಳು ಕರೆ ಮಾಡಿ ದೂರು ನೀಡುತ್ತಿದ್ದಾರೆ. ಆದರೆ, ಜಿಲ್ಲೆಯಲ್ಲಿ ಈ ವರೆಗೆ 2 ಪ್ರಕರಣಗಳು ಮಾತ್ರ ಪತ್ತೆಯಾಗಿವೆ. ಪ್ರತೀ ತಿಂಗಳು ಈ ಬಗ್ಗೆ ಪರಿಶೀಲಿಸಬೇಕು. ಹೊಸಪೇಟೆಯ ಹೆರಿಗೆ ಆಸ್ಪತ್ರೆ ಸೇರಿದಂತೆ ಎಲ್ಲ ತಾಲೂಕು ಆಸ್ಪತ್ರೆಗಳಲ್ಲಿ ಬಿಸಿ ನೀರಿನ ವ್ಯವಸ್ಥೆ ಮಾಡಬೇಕು ಎಂದು ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ. ರಕ್ತ ಹೀನತೆ ಮತ್ತು ಅಪೌಷ್ಠಿಕತೆಯಿಂದ ಕಳೆದ ಐದು ವರ್ಷಗಳಲ್ಲಿ 422 ಶಿಶುಗಳು ಮೃತಪಟ್ಟಿವೆ. ತಾಲೂಕು ಆಸ್ಪತ್ರೆಗಳಲ್ಲಿರುವ ಅಪೌಷ್ಠಿಕ ನಿವಾರಣಾ ಕೇಂದ್ರದಲ್ಲಿ ಮಕ್ಕಳಿಗೆ ಸರದಿಯಂತೆ ಆರೈಕೆ ಮಾಡಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಶ್ವೇತಾ, ಕಾರ್ಯಕ್ರಮಾಧಿಕಾರಿ ಸುಭದ್ರಾದೇವಿ ಇತರರಿದ್ದರು ಉಪಸ್ಥಿತರಿದ್ದರು.

# ಬಂಡವಾಳಶಾಹಿಗಳಿಗೆ ಮಣೆ ಜನ ಸಾಮಾನ್ಯರಿಗೆ ಬರೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದು ಒಂದು ದಶಕವಾದರೂ ನಿರುದ್ಯೋಗದ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಚರ್ಚಿಸಬೇಕಾದ ಬೆಲೆ ಏರಿಕೆ, ಭ್ರಷ್ಟಾಚಾರ, ಖಾಸಗೀಕರಣದಂತಹ ವಿಷಯಗಳಿಗೆ ಆಳುವ ಸರ್ಕಾರಗಳು ಮೌನವಹಿಸಿವೆ. ಇತ್ತ ಸಾಮಾನ್ಯ ಜನರು ಜೀವನದ ನಡೆಸಲು ತತ್ತರಿಸುತ್ತಿದ್ದಾರೆ ಎಂದು ಎಸ್.ಯು.ಸಿ.ಐ.(ಕಮ್ಯುನಿಸ್ಟ್) ಪಕ್ಷದ ಬಳ್ಳಾರಿ ಜಿಲ್ಲಾ ಸಮಿತಿ ಸದಸ್ಯರಾದ ದೇವದಾಸ್ ಎ. ಹೇಳಿದರು.

ನಗರದ ತಾಲೂಕು ಕಚೇರಿ ಮುಂಭಾಗದಲ್ಲಿ ಎಸ್.ಯು.ಸಿ.ಐ.(ಕಮ್ಯುನಿಸ್ಟ್) ಪಕ್ಷವು ವಿಜಯನಗರ ಜಿಲ್ಲಾ ಸ್ಥಳೀಯ ಸಮಿತಿ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಜನರ ಜ್ವಲಂತ ಸಮಸ್ಯೆಗಳ ವಿರುದ್ಧ ದೇಶವ್ಯಾಪಿ ಸಹಿ ಸಂಗ್ರಹ ಆಂದೋಲನಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದರು. ಬೆಲೆ ಏರಿಕೆಯ ಬಿಸಿ, ಉದ್ಯೋಗವಿಲ್ಲದ ಸ್ಥಿತಿ, ಬೆಳಗಳಿಗೆ ಯಾವುದೇ ಕನಿಷ್ಠ ಬೆಂಬಲ ಬೆಲೆ ಸಿಗುತ್ತಿಲ್ಲ, ಇದರಿಂದ ರೈತರು ಕಂಗಾಲಾಗಿದ್ದಾರೆ. ಬೀಜ, ಗೊಬ್ಬರ, ಔಷದಿಗಳ ಬೆಲೆಗಳು ಗಗನಕ್ಕೇರಿವೆ. ಕೃಷಿ ಬೆಳೆಗಳಿಗೆ ಬೆಂಬಲ ಬೆಲೆ ನೀಡುವ ವಾಗ್ದಾನ ಮಾಡಿದ್ದ ಕೇಂದ್ರ ಸರ್ಕಾರ ಎರಡು ವರ್ಷಗಳ ನಂತರವೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ರಾಜ್ಯದ ಬಗರ್ ಹುಕುಂ ರೈತರು ಭೂಮಿಯ ಹಕ್ಕುಪತ್ರಕ್ಕಾಗಿ ಸತತವಾಗಿ ಹೋರಾಡುತ್ತಿದ್ದಾರೆ. ಆದರೂ ಅವರಿಗೆ ಹಕ್ಕು ಪತ್ರ ದೊರೆತಿಲ್ಲ. ಸರ್ಕಾರಿ ಇಲಾಖೆಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇವೆ. ಆದರೂ ಭರ್ತಿ ಮಾಡಿಕೊಳ್ಳಲು ಕೇಂದ್ರ ಸರ್ಕಾರವಾಗಲೀ ರಾಜ್ಯ ಸರ್ಕಾರವಾಗಲೀ ಮುಂದಾಗುತ್ತಿಲ್ಲ. ಅದರ ಬದಲಾಗಿ ಗುತ್ತಿಗೆ, ಹೊರ ಗುತ್ತಿಗೆ ನೌಕರಿಗಳನ್ನು ಮತ್ತು ಅತಿಥಿ ಎಂಬ ಹೆಸರಲ್ಲಿ ಶಿಕ್ಷಕರನ್ನು, ಉಪನ್ಯಾಸಕರನ್ನು ಭರ್ತಿ ಮಾಡಿಕೊಳುತ್ತಿದೆ. ಇವರುಗಳಿಗೆ ಯಾವುದೇ ಉದ್ಯೋಗದ ಭದ್ರತೆ ಎಂಬುದು ಇಲ್ಲವೇ ಇಲ್ಲ. ದುಡಿದ ಕೆಲಸಕ್ಕೆ ತಕ್ಕಂತಹ ಸಂಬಳವೂ ಸಿಗುತ್ತಿಲ್ಲ. ಇದರಿಂದ ಎಷ್ಟೋ ಅಮಾಯಕ ಯುವಕರು ಶೋಷಣೆಯನ್ನು ಅನುಭವಿಸುತ್ತಿದ್ದಾರೆ. ಜೊತೆಗೆ ಮಹಿಳೆಯರು, ಮಕ್ಕಳ ಮೇಲೆ ಅತ್ಯಾಚಾರ, ದೌರ್ಜನ್ಯದಂತಹ ಪ್ರಕರಣಗಳು ಹೆಚ್ಚಾಗುತ್ತಿವೆ. >>2

**ಮೈಕ್ರೋ ನ್ಯೂಸ್**

## ಇ-ಕೆವೈಸಿ ಮಾಡಿಸಿದರೆ ಮಾತ್ರ ಸಬ್ಸಿಡಿ ವದಂತಿಗೆ ಕಿವಿಗೊಡದಿರಿ

**ಹಂಪಿ ಟೈಮ್ಸ್ ಹೊಸಪೇಟೆ**

ಅಡುಗೆಅನಿಲ ಸಂಪರ್ಕ ಹೊಂದಿರುವ (ಎಲ್.ಪಿ.ಜಿ ಗ್ಯಾಸ್) ಫಲಾನುಭವಿಗಳು, ಇ-ಕೆವೈಸಿ ಮಾಡಿಸಿದರೆ ಮಾತ್ರ ಸಬ್ಸಿಡಿ >>3


# NEW ವೃತ್ತಿ ಜೀವನಕ್ಕೆ ಹಾರ್ದಿಕ ಶುಭಾಶಯಗಳು

ಷಟಸ್ಥಳ ಬ್ರಹ್ಮ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಹಾಗೂ ಡಾಕ್ಟರ್ ಶ್ರೀ ಟಿ ಎಂ ಚಂದ್ರಶೇಖರಯ್ಯ ಇವರ ಪರಿಶ್ರಮ ಹಾಗೂ ಆಶಯದಂತೆ ಹೊಸಪೇಟೆ ನಗರದಲ್ಲಿ 1982 ರಲ್ಲಿ ಪ್ರಾರಂಭವಾದ ಟಿ.ಎಂ.ಎ.ಇ ಎಸ್ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯರಾಗಿ ಯಶಸ್ವಿಯಾಗಿ ಮುನ್ನಡೆಸಿದ ಪ್ರಸ್ತುತ ಟಿ.ಎಂ.ಎ.ಇ ಎಸ್ ಸಂಸ್ಥೆಯ ಉಪ ಕಾರ್ಯದರ್ಶಿಯಾಗಿರುವ ಶ್ರೀ ಟಿ ಎಂ ವಿಜಯಕುಮಾರ್ ಇವರ ನಿವೃತ್ತಿಯ ನಂತರ ಈ ಸಂಸ್ಥೆಯ ಪ್ರಾಚಾರ್ಯರಾಗಿ ಅಧಿಕಾರ ವಹಿಸಿಕೊಂಡವರು ಹಿರಿತನದಲ್ಲಿ ಜೇಷ್ಠರಾದ ಶ್ರೀ ಟಿ ಎಂ ವಿಜಯಕುಮಾರ್ ಸರ್ ಅವರ ಆಪ್ತರಾದ ಹಾಗೂ ತೆಗ್ಗಿನ ಮಠ ಸಂಸ್ಥೆ ಸ್ವಾಮೀಜಿಗಳ ಆಶೀರ್ವಾದವನ್ನು ಹೊಂದಿದ್ದ ಶ್ರೀ ಥಿ ಟ ಉಮಾಶಂಕರ್ ಸರ್. ಇವರು ಹುಟ್ಟಿದ್ದು 1963 ನೇ ಡಿಸೆಂಬರ್ 7ರಂದು ಹೂವಿನಹಡಗಲಿ ತಾಲೂಕ್ ಸೋಗಿ ಗ್ರಾಮದಲ್ಲಿ. ಇವರು ದಿವಂಗತ ಶ್ರೀ ವೈ ಎಂ ಪಂಚಾಕ್ಷರಯ್ಯ ಹಾಗೂ ಶ್ರೀಮತಿ ನಿರ್ಮಲಾದೇವಿ ದಂಪತಿಗಳಿಗೆ ಜೇಷ್ಠ ಪುತ್ರರಾಗಿ ಜನಿಸಿದ್ದಾರೆ. ಇವರಿಗೆ ಇಬ್ಬರು ಸೋದರರು ಹಾಗೂ ಸಹೋದರಿಯರು ಇದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಹರಪನಹಳ್ಳಿಯಲ್ಲಿ ಮತ್ತು ಪ್ರೌಢ ಶಿಕ್ಷಣವನ್ನು ಹೊಸಪೇಟೆಯಲ್ಲಿ, ಪದವಿಪೂರ್ವ ಶಿಕ್ಷಣವನ್ನು ಬಳ್ಳಾರಿಯಲ್ಲಿ ಪೂರ್ಣಗೊಳಿಸಿದ್ದಾರೆ. ವಿದ್ಯಾಭ್ಯಾಸದಲ್ಲಿ ಪ್ರತಿಭಾನ್ವಿತರಾಗಿದ್ದ ಉಮಾಶಂಕರ್ ಸರ್ ಇವರು ಗುಲ್ಬರ್ಗದ ಪಿಡಿಎ ಕಾಲೇಜ್ ಆಫ್ ಇಂಜಿನಿಯರಿಂಗ್ ನಲ್ಲಿ ಬಿ ಇ(ಸಿವಿಲ್) ಪದವಿಯನ್ನು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಇವರ ವಿದ್ಯಾರ್ಹತೆಗೆ ತಕ್ಕ ಫಲವೆಂಬಂತೆ ಅವರಿಗೆ ಟಾಟಾ ಕನ್ಸ್ಟ್ರಕ್ಷನ್ ಕಂಪನಿ ಮುಂಬೈ ನಗರದಲ್ಲಿ ಉದ್ಯೋಗದ ಅವಕಾಶ ಅವರ ಮನೆ ಬಾಗಿಲಿಗೆ ಹುಡುಕಿಕೊಂಡು ಬಂದಿತ್ತು. ಆದರೆ ಸ್ನೇಹಿತರು ಹಾಗೂ ಸಹೋದರರು ಆದ ಶ್ರೀ ಟಿ ಎಂ ಚಂದ್ರಾಧರ ಅವರ ಸಲಹೆ ಮೇರೆಗೆ, ಕುಟುಂಬದವರ ಅಪೇಕ್ಷೆಯಂತೆ ಟಿ ಎಂ ಎ ಎಸ್ ಪಾಲಿಟೆಕ್ನಿಕ್ ಕಾಲೇಜಿನ ಸಿವಿಲ್ ವಿಭಾಗದ ಉಪನ್ಯಾಸಕ ಹುದ್ದೆಗೆ ಅರ್ಜಿಯನ್ನು ಸಲ್ಲಿಸಿದರು. ನಂತರ ಆಗಿನ ಸಂಸ್ಥೆಯ ಅಧ್ಯಕ್ಷರಾಗಿದ್ದ ಶ ಬ್ರ ಲಿಂಗೈಕ್ಯ ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯರ ಆಶೀರ್ವಾದದೊಂದಿಗೆ ಹಾಗೂ ಕಾರ್ಯದರ್ಶಿಗಳಾದ ಶ್ರೀ ಟಿ ಎಂ ಚಂದ್ರಶೇಖರಯ್ಯನವರ ಮೂಲಕ ಆರ್ಡರ್ ಪಡೆದು ಜುಲೈ 2 1987ರಲ್ಲಿ ಉಪನ್ಯಾಸಕರಾಗಿ ಸೇವೆಗೆ ಸೇರಿಕೊಂಡರು.

ಸತತ ನಾಲ್ಕು ವರ್ಷಗಳ ಉಪನ್ಯಾಸಕ ವೃತ್ತಿ ಮಾಡಿ, 1991 ರಿಂದ ಸಿವಿಲ್ ವಿಭಾಗದ ಮುಖ್ಯಸ್ಥರಾಗಿ ಬಡ್ತಿ ಹೊಂದಿದರು. ಪ್ರಾಚಾರ್ಯರಾಗಿದ್ದ ಶ್ರೀ ಟಿ ಎಂ ವಿಜಯಕುಮಾರ್ ಅವರಿಗೆ ಹೆಗಲಿಗೆ ಹೆಗಲು ಕೊಟ್ಟು ಸಂಸ್ಥೆ ಏಳಿಗೆಗೆ ಸಹಕಾರಿಯಾದರು. ಆಗಿನ್ನು ಸಂಸ್ಥೆಯು ಸರ್ಕಾರದಿಂದ ಅನುದಾನ ಕೊಳಪಟ್ಟಿರಲಿಲ್ಲ. ವಿದ್ಯಾರ್ಥಿಗಳ ಸಂಖ್ಯೆ ಅಷ್ಟಾಗಿ ಇರಲಿಲ್ಲ. ವಿದ್ಯಾರ್ಥಿಗಳ ಪ್ರವೇಶ ಶುಲ್ಕದಿಂದಲೇ ಸಂಸ್ಥೆಯ ಅಭಿವೃದ್ಧಿ ಹಾಗೂ ಸಿಬ್ಬಂದಿಯ ಸಂಬಳವನ್ನು ನಿರ್ವಹಿಸಬೇಕಾಗಿತ್ತು. ಅಂತಹ ಸಂದರ್ಭದಲ್ಲಿ ಶ್ರೀ ಟಿ ಎಂ ವಿಜಯಕುಮಾರ್ ಹಾಗೂ ಸಂಸ್ಥೆಯವರ ಮಾರ್ಗದರ್ಶನದಲ್ಲಿ ತಿಂಗಳಾನುಗಟ್ಟಲೆ ಬೇರೆ ಬೇರೆ ರಾಜ್ಯಗಳಲ್ಲಿ ಹಾಗೂ ಉತ್ತರ ಭಾರತದ ಹಲವಾರು ಪ್ರದೇಶಗಳಲ್ಲಿ ಸಂಚರಿಸಿ ಅಲ್ಲಿನ ವಿದ್ಯಾರ್ಥಿಗಳ ಮನವೊಲಿಸಿ, ಸಂಸ್ಥೆಯು ನಡೆಸುತ್ತಿರುವ ಬೇರೆ ಬೇರೆ ಕಾಲೇಜುಗಳ ಪ್ರವೇಶ ಮಾಡಿಸಿದ ಶ್ರೇಯಸ್ಸು ಉಮಾ ಶಂಕರ್ ಸರ್ ಇವರಿಗೆ ಸಲ್ಲಲೇ ಬೇಕು. ಮೂಲತಹ ಸಿವಿಲ್ ಇಂಜಿನಿಯರ್ ಆದ ಇವರು ಕಟ್ಟಡ ವಿನ್ಯಾಸ ನಿರ್ಮಾಣ ಹಾಗೂ ನಿರ್ವಹಣೆಯಲ್ಲಿ ಅಪಾರ ನೈಪುಣ್ಯತೆಯನ್ನು ಹೊಂದಿರುತ್ತಾರೆ. ಹೊಸಪೇಟೆಯ ಪಾಲಿಟೆಕ್ನಿಕ್ ಕಾಲೇಜ್ ಆಗಿರಬಹುದು ಸಂಸ್ಥೆಯ ಇನ್ನಿತರೆ ಕಾಮಗಾರಿಗಳಾಗಿರಬಹುದು ಅವುಗಳ ನಿರ್ಮಾಣದ ಹಿಂದೆ ಉಮಾಶಂಕರ್ ಸರ್ ಇವರ ಪರಿಶ್ರಮ ಸಾಕಷ್ಟಿದೆ. ಸ್ವಾಮೀಜಿಗಳು ಹಾಗೂ ಕಾರ್ಯದರ್ಶಿಗಳು ವಹಿಸಿಕೊಟ್ಟ ಕಟ್ಟಡಗಳ ನಿರ್ಮಾಣದ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಬಂದಿರುತ್ತಾರೆ. ಇವರ ಬಾಳ ಸಂಗಾತಿಯಾಗಿ ಜೊತೆಯಾದವರು ಶ್ರೀಮತಿ ವೈ ಎಂ ಶೈಲ. ಕಾಲೇಜಿನ ಸೇವಾ ಅವಧಿಯುದ್ದಕ್ಕೂ ಬೆಂಗಾವಲಾಗಿ ನಿಂತವರು ಈ ಗೃಹಿಣಿ, ಇವರಿಗೆ ಮುದ್ದಾದ ಎರಡು ಗಂಡು ಮಕ್ಕಳು. ತಂದೆಯಂತೆಯೇ ಮೊದಲ ಮಗ ಆಕಾಶ್ ಎಂ ಆರ್ಕಿಟೆಕ್ಟ್ ಇಂಜಿನಿಯರ್ ಪದವಿ ಪಡೆದು ಬೆಂಗಳೂರಿನ ಪ್ರತಿಷ್ಠಿತ ಕಂಪನಿಯಲ್ಲಿ ಆರ್ಕಿಟೆಕ್ಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಎರಡನೇ ಮಗ ಅಭಿನವ್ ಕೂಡ ಬಿ ಇ ಕಂಪ್ಯೂಟರ್ ಸೈನ್ಸ್ ವ್ಯಾಸಂಗ ಮಾಡುತ್ತಿರುತ್ತಾನೆ 1999–2000 ಇಸ್ವಿ ಹೊತ್ತಿನಲ್ಲಿ 15 ವರ್ಷ ಅವಧಿ ಪೂರ್ಣಗೊಳಿಸಿದ ರಾಜ್ಯದ ಸುಮಾರು 28 ಪೊಲಿಟೆಕ್ನಿಕಲ್ ಕಾಲೇಜುಗಳನ್ನು ಸರ್ಕಾರದ ಅನುದಾನ ಕೊಳಪಡಿಸುವ ಪ್ರಕ್ರಿಯೆ ಆರಂಭವಾಯಿತು. ಈ ಎಲ್ಲಾ ಕಾಲೇಜುಗಳ ಅನುದಾನ ಕೊಳಪಡಿಸುವ ಜವಾಬ್ದಾರಿಯನ್ನು ಆಗಿನ ಪ್ರಾಚಾರ್ಯರಾದ ಶ್ರೀ ಟಿ ಎಂ ವಿಜಯ್ ಕುಮಾರ್ ಅವರು ವಹಿಸಿಕೊಂಡಿದ್ದರು,

ಆ ಸಂದರ್ಭದಲ್ಲಿ ಪ್ರಾಚಾರ್ಯರಾಗಿದ್ದ ವಿಜಯಕುಮಾರ್ ಇವರು ಪದೇಪದೇ ಬೆಂಗಳೂರಿಗೆ ಅಲೆದಾಡುವ ಸಂದರ್ಭದಲ್ಲಿ ಕಾಲೇಜಿನಲ್ಲಿ ನಡೆಸಿಕೊಂಡು ಹೋಗುವ ಸಂಪೂರ್ಣ ಜವಾಬ್ದಾರಿಯನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡಿದ್ದರು. ಅದೇ ತಾನೆ ಕೆಲಸಕ್ಕೆ ಸೇರಿಕೊಂಡ ನೂರಾರು ಉದ್ಯೋಗಿಗಳಲ್ಲಿ ವಿಶ್ವಾಸವನ್ನು ತುಂಬವ ಜವಾಬ್ದಾರಿ ಅವರ ಮೇಲಿತ್ತು. ಆ ಸಂದರ್ಭದಲ್ಲಿ ಅತ್ಯಂತ ನಾಜೂಕಾಗಿ ತಾಳ್ಮೆಯಿಂದ ವಿಜಯಕುಮಾರ್ ಅವರಂತೆ ಎಲ್ಲ ಸಿಬ್ಬಂದಿಯವರ ಮನಸ್ಸು ಗೆದ್ದು ಸಂಸ್ಥೆಯನ್ನು ನಡೆಸಿಕೊಂಡು ಬಂದಿದ್ದು ಅವರ ಜಾಣ್ಮೆಗೆ ಹಿಡಿದ ಕನ್ನಡಿ. ಇದೆಲ್ಲದರ ಪ್ರತಿಫಲದಂತೆ ಫೆಬ್ರುವರಿ 2022 ರಲ್ಲಿ ವಿಜಯ್ ಕುಮಾರ್ ಇವರ ನಿವೃತ್ತಿಯ ನಂತರ 2023ರ ಡಿಸೆಂಬರ್ ವರೆಗೆ ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸಿ ಆ ಹುದ್ದೆಯ ಘನತೆಯನ್ನು ಹೆಚ್ಚಿಸಿದ್ದಾರೆ ಮತ್ತು ಸಂಸ್ಥೆಯ ಬೆಳವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ತಮ್ಮ ಸೇವಾವಧಿಯುದ್ಧಕ್ಕೂ ಎಲ್ಲರೊಳಗೊಂದಾಗಿ, ಎಲ್ಲರಿಗೂ ಬೇಕಾಗಿ ಒಂದಿನಿತೂ ಮುನಿಯದೆ ಸದಾ ಹಸನ್ಮುಖಿಯಾಗಿ, ಸಂತುಷ್ಟ ಸೇವೆಯನ್ನು ಸಲ್ಲಿಸಿದ್ದು ಅವರ ಸೌಭಾಗ್ಯವೇ ಸರಿ. 37 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿ ಹೊಂದುತ್ತಿರುವ ಉಮಾಶಂಕರ್ ಇವರಿಗೆ ತೆಗ್ಗಿನ ಮಠ ಸಂಸ್ಥಾನದ ಅಧ್ಯಕ್ಷರಾದ ವರಸದ್ಯೋಜ್ಯಾತ ಸ್ವಾಮೀಜಿಯವರ ಕೃಪಾ ಕಟಾಕ್ಷ ಮತ್ತು ಅಪಾರ ಆಶೀರ್ವಾದವಿದೆ, ಕಾರ್ಯದರ್ಶಿಗಳ ಹಾಗೂ ಉಪ ಕಾರ್ಯದರ್ಶಿಗಳ ಮಾರ್ಗದರ್ಶನವಿದೆ ಸಂಸ್ಥೆಯಲ್ಲಿ ದುಡಿಯುತ್ತಿರುವ ಎಲ್ಲಾ ಸಿಬ್ಬಂದಿಗಳ ಹಾರೈಕೆ ಇದೆ. ಸೇವೆಯಿಂದ ನಿವೃತ್ತರಾದರೂ NEW ವೃತ್ತಿಯೊಂದಿಗೆ ತಮ್ಮ ಜೀವನದ ಮುಂದಿನ ದಾರಿಯಲ್ಲಿ ತಮ್ಮ ಜೊತೆ ಬೇರೆಯವರನ್ನು ಸಹ ಬೆಳೆಸಲಿ ಎಂಬುದು ನಮ್ಮ ಹಾರೈಕೆ. ಮತ್ತು ನೂರು ಕಾಲ ಆಯುರ್‌ಆರೋಗ್ಯದಿಂದ ಸಂತೃಪ್ತ ಜೀವನ ಸಾಗಲಿ ಎಂಬುದು ಎಲ್ಲರ ಹಾರೈಕೆ



**ಶ್ರೀ.ವೈ.ಎಂ.ಉಮಾಶಂಕರ**

ಪ್ರಾಚಾರ್ಯರು, ಟಿ.ಎಂ.ಎ.ಇ.ಎಸ್. ಪಾಲಿಟೆಕ್ನಿಕ್ ಹೊಸಪೇಟೆ

**ಶುಭ ಕೋರುವವರು: ಅಧ್ಯಕ್ಷರು, ಆಡಳಿತ ಮಂಡಳಿ, ಟಿ.ಎಂ.ಎ.ಇ.ಎಸ್ ಪಾಲಿಟೆಕ್ನಿಕ್ ಹೊಸಪೇಟೆ**

## ವಚನ ಅರಿವು

### ಸತ್ಯವೇ ತೀರ್ಥ

ಸತ್ಯದ ನುಡಿ ತೀರ್ಥ, ಭಕ್ತಿಯ ನಡೆ ತೀರ್ಥ,
ಮುಕ್ತಿಯ ಪ್ರಸಂಗ ಉಳ್ಳಡೆ ತೀರ್ಥ,
ಹರಿವ ನದಿ ಎತ್ತಣಾ ತೀರ್ಥ !
ರಾಮನಾಥ.

– ಜೇಡರ ದಾಸಿಮಯ್ಯ

ಮನುಷ್ಯ ಹುಸಿತನದಲ್ಲಿ ಬದುಕಬಾರದು. ಸತ್ಯದೊಂದಿಗೆ ಬದುಕಿದರೆ ಅವನ ಬದುಕು ಪುಣ್ಯಕ್ಷೇತ್ರದ ತೀರ್ಥವಾಗುತ್ತದೆ. ನೈತಿಕತೆಯನ್ನು ರೂಢಿಸಿಕೊಂಡು ಬದುಕಿದರೆ ಸಮಾಜ ಸರಿದಾರಿಯಲ್ಲಿ ಸಾಗುತ್ತದೆ. ಇದು ಪ್ರತಿಯೊಬ್ಬರ ಕರ್ತವ್ಯವಾಗಬೇಕು. ಇಂತಹ ನೈತಿಕ ಮಾರ್ಗಗಳಲ್ಲಿ ನಡೆ–ನುಡಿ ಶುದ್ಧತೆ ಬಹಳ ಮುಖ್ಯವಾದುದಾಗಿದೆ. ನೀವು ಸತ್ಯವನ್ನೆ ನುಡಿದರೆ ಅದೇ ಪವಿತ್ರ ತೀರ್ಥವಾಗಿರುತ್ತದೆ. ಭಕ್ತಿಯ ಜೀವನವನ್ನು ಸಾಗಿಸಿದರೆ, ಸನ್ನಡೆತೆಯಲ್ಲಿದ್ದರೆ ಅದೇ ತೀರ್ಥವಾಗುತ್ತದೆ. ಮನಸ್ಸಿನಲ್ಲಿ, ಸುಳ್ಳು, ಕಪಟ, ಮೋಸ, ವಂಚನೆ ತುಂಬಿಕೊಂಡು ಯಾವ ತೀರ್ಥ ಕ್ಷೇತ್ರಗಳಿಗೆ ಹೋಗಿ ಪುಣ್ಯ ಸ್ನಾನ ಮಾಡಿದರೂ ನಿಮಗೆ ಪುಣ್ಯ ಬರುವುದಿಲ್ಲ, ಮುಕ್ತಿಯೂ ದೊರೆಯುವುದಿಲ್ಲ. ಹರಿವ ನದಿಯ ನೀರು ತೀರ್ಥವಾಗುವುದಿಲ್ಲ. ಮನದೊಳಗಿನ ಮೈಲಿಗೆ ಕಳೆದರೆ ಜೀವನವೇ ತೀರ್ಥವಾಗುತ್ತದೆ ಎನ್ನುತ್ತಾನೆ ಜೇಡರ ದಾಸಿಮಯ್ಯ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 9448633038

## ಜನಸಾಮಾನ್ಯರಿಗೆ ಬರೆ

ಮೊದಲ ಪುಟದಿಂದ

ಇವುಗಳನ್ನು ತಡೆ ಹಿಡಿಯಬೇಕು. ಆಳುವ ಸರ್ಕಾರಗಳು ದೇಶದ ಅಭಿವೃದ್ಧಿ ಎಂಬ ಹೆಸರಿನಲ್ಲಿ ಕೇವಲ ರಸ್ತೆ ನಿರ್ಮಾಣ, ಷೇರು ಸೂಚ್ಯಾಂಕ ಮುಂತಾದವುಗಳಿಗೆ ಸೀಮಿತಗೊಳಿಸಿದೆ. ಈ ಮೂಲಕ ಬಂಡವಾಳಶಾಹಿ ಪರವಾದ ಧೋರಣೆಯನ್ನು ತೋರಿಸುತ್ತಿವೆ. ಬಂಡವಾಳಶಾಹಿಗಳ ಮನವೊಲಿಸಲು ಸರ್ಕಾರಿ ಇಲಾಖೆಗಳನ್ನು ಖಾಸಗೀಕರಣ ಮಾಡುತ್ತಿರುವುದು ಮುಂದುವರೆದಿದೆ. ಇದು ದೇಶದ ಜನರಿಗೆ ಮಾಡುವ ಅನ್ಯಾಯ. ಇದು ನಿಲ್ಲಬೇಕು. ಹೊಸ ಶಿಕ್ಷಣ ನೀತಿಯ ಹೆಸರಿನಲ್ಲಿ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಟವಾಡುತ್ತಿವೆ. ಇದನ್ನು ಕೂಡಲೇ ನಿಲ್ಲಿಸಬೇಕು ಎಂದು ಆಗ್ರಹಿಸಿದ ಅವರು, ಸಹಿ ಸಂಗ್ರಹ ಆಂದೋಲನ ಮತ್ತು ರಾಜ್ಯ ಮಟ್ಟದ ಬೆಂಗಳೂರು ಚಲೋ ಹೋರಾಟಗಳಿಗೆ ಕರೆ ನೀಡಿದೆ ಎಂದರು. ರಾಜ್ಯದ ಪ್ರಮುಖ ಆರ್ಥಿಕ ತಜ್ಞರು ಹಾಗೂ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಟಿ.ಆರ್. ಚಂದ್ರಶೇಖರ್ ಅವರು ಸಹಿಸಂಗ್ರಹ ಆಂದೋಲನದಲ್ಲಿ ಭಾಗವಹಿಸಿ ಬೆಂಬಲ ನೀಡಿದರು.

ಈ ಸಂದರ್ಭದಲ್ಲಿ ಎಸ್.ಯು.ಸಿ.ಐ.(ಕಮ್ಯುನಿಸ್ಟ್) ಪಕ್ಷದ ಸ್ಥಳೀಯ ಸಮಿತಿ ಕಾರ್ಯದರ್ಶಿಗಳಾದ ಪ್ರಶಾಂತ್ ಬಡಿಗೇರ, ಸದಸ್ಯರುಳಾದ ಎರ್ರಿಸ್ವಾಮಿ, ಪ್ರಕಾಶ್ ನಾಯ್ಕ್, ಪಾಲಾಕ್ಷ, ಅಜಯ್, ಪಂಪಾಪತಿ, ಮತ್ತಿತರರು ಭಾಗವಹಿಸಿದ್ದರು.




# ಮಕ್ಕಳ ಕನಸಿಗೆ ಬಣ್ಣ ಹಚ್ಚೋಣ

## ಈಗ 2023 ಕೊನೆಗೊಳ್ಳುತ್ತಿದೆ. 2024ರಲ್ಲಾದರೂ ನಾವು ಜಾಗೃತರಾಗೋಣ.





ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು
soppi.mata@gmail.com

ಮಕ್ಕಳ ಕುರಿತಾದ ಅಸಡ್ಡೆ ನಿನ್ನೆ ಮೊನ್ನೆಯದೇನಲ್ಲ. ಆದರೆ ಮುಂದುವರೆದ ನಾಗರೀಕ ಸಮಾಜ ಎಂದು ಎದೆಯುಬ್ಬಿಸಿ ಮಾತನಾಡುವ ನಾವು ಮಕ್ಕಳಿಗೆ ನೀಡಿರುವ ಪ್ರಾಶಸ್ತ್ಯವನ್ನು ಒಮ್ಮೆ ಅವಲೋಕಿಸಿದರೆ ನಮ್ಮ ಬಂಡವಾಳ ತಿಳಿಯುತ್ತದೆ. ಹಿಂತಿರುಗಿ ನೋಡಿದಾಗ ಮಕ್ಕಳಿಗೆ ನಾವು ಕೊಡುತ್ತಿರುವ ಮಹತ್ವ, ನೋಡಿಕೊಳ್ಳುವ ರೀತಿಗಳು ನಮ್ಮನ್ನೆಲ್ಲ ಅಣಕಿಸುವಂತಿವೆ. ಮಕ್ಕಳ ಮನಸ್ಸನ್ನು ಅರಳಿಸಿ, ಕುತೂಹಲವನ್ನು ಕೆರಳಿಸಿ, ಕಲ್ಪನೆಯನ್ನು ರೂಪಿಸಿ, ಭಾವನೆಗಳನ್ನು ಪ್ರಚೋದಿಸಿ, ಆನಂದದಲ್ಲಿ ಮೀಯಿಸಿ ಅವರ ವ್ಯಕ್ತಿತ್ವವನ್ನು ರೂಪಿಸುವಂತಾಗಬೇಕು ಎನ್ನುವ ಮಾತುಗಳು ಕೃತಿಯಲ್ಲಿ ಕಾಣುತ್ತಲೇ ಇಲ್ಲ. ಈ ಕುರಿತು ಚಿಂತನಶೀಲ ಕವಿ ಖಲೀಲ್ ಗಿಬ್ರಾನರ ಕಾವ್ಯವೊಂದರ ಅದ್ಭುತ ಸಾಲುಗಳು ಇಲ್ಲಿ ನೆನಪಾಗುತ್ತವೆ.

ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ.
ಜೀವನದ ಸ್ವ ಪ್ರೇಮದ ಪುತ್ರ ಪುತ್ರಿಯರು ಅವರು.
ಅವರು ನಿಮ್ಮ ಮೂಲಕ ಬಂದಿದ್ದಾರೆಯೇ ಹೊರತು ನಿಮ್ಮಿಂದಲ್ಲ.
ನಿಮ್ಮ ಜತೆ ಇರುವವರಾದರೂ ಅವರು ನಿಮಗೆ ಸೇರಿದವರಲ್ಲ.
ನಿಮ್ಮ ಪ್ರೀತಿಯನ್ನು ನೀವು ಅವರಿಗೆ ನೀಡಬಹುದು,
ಆದರೆ ನಿಮ್ಮ ಆಲೋಚನೆಗಳನ್ನಲ್ಲ.
ಏಕೆಂದರೆ ಅವರಿಗೆ ಅವರದ್ದೇ ಸ್ವಂತ ಆಲೋಚನೆಗಳುಂಟು.
. . . . . . . . . . . . . . . . . . . . . . . . . . . .
ಅವರಂತಿರಲು ನೀವು ಪ್ರಯತ್ನಿಸಬಹುದು.
ಆದರೆ ಅವರನ್ನು ನಿಮ್ಮಂತೆ ಮಾಡಲು ಪ್ರಯತ್ನಿಸದಿರಿ.
. . . . . . . . . . . . . . . . . . . . . . . . . . . .

ಆದರೆ ವಾಸ್ತವದ ಚಿತ್ರಣ ಮಕ್ಕಳ ಕನಸಿಗೆ ಬಣ್ಣ ಹಚ್ಚುವ ಯಾವ ಪ್ರಯತ್ನವೂ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ. ಹಿರಿಯರ ಸಮಸ್ಯೆಗೆ ನೀಡುವ ಕಾಲುಭಾಗದಷ್ಟು ಗಮನ ಕೂಡ ಮಕ್ಕಳ ಸಮಸ್ಯೆಗೆ ನೀಡಲಾಗುತ್ತಿಲ್ಲ. ನಮಗೆ ಇವತ್ತಿಗೂ ಮಕ್ಕಳ ಸ್ವತಂತ್ರ ಲೋಕದ ಬಗ್ಗೆ ಅನುಮಾನವಿದೆ. ಮಕ್ಕಳ ವಿಚಾರದಲ್ಲಿ ಯಾವತ್ತೂ ನಾವು ಬಹಳ ದೊಡ್ಡ ತಪ್ಪೊಂದನ್ನು ಮಾಡುತ್ತಿರುತ್ತೇವೆ. ಆದೆಂದರೆ, ನಾವು ದೊಡ್ಡವರು, ಸರ್ವಜ್ಞರು, ಮಕ್ಕಳು ದಡ್ಡರು, ಅವರಿಗೆ ಏನೂ ಗೊತ್ತಿಲ್ಲ, ಎಲ್ಲವನ್ನೂ ಅವರಿಗೆ ಹೇಳಿಕೊಡುತ್ತಾ ಅವರನ್ನು ಸರಿದಾರಿಗೆ ತರುವವರು ಹಿರಿಯರು. ಬಹುಶಃ ಇದಕ್ಕಿಂತಲೂ ದೊಡ್ಡದಾದ ಸುಳ್ಳು ಈ ಜಗತ್ತಿನಲ್ಲಿ ಮತ್ಯಾವುದೂ ಇಲ್ಲ. ಈ ಜಗತ್ತಿಗೆ ಕಾಲಿರಿಸುವ ಪ್ರತಿಯೊಂದು ಮಗುವೂ ಒಂದಲ್ಲಾ ಒಂದು ರೀತಿಯಲ್ಲಿ ಮೇಧಾವಿಗಳಾಗಿರುತ್ತದೆ. ಬುದ್ಧಿವಂತಿಕೆಯಲ್ಲೂ ಅವರು ದೊಡ್ಡವರನ್ನು ಹಿಂದಿಕ್ಕುತ್ತಾರೆ. ಎಷ್ಟೋ ಸಾರಿ ಹಿರಿಯರಿಗೆ ಹೊಳೆಯಲಾರದ್ದು ಎಳೆಯರಿಗೆ ಹೊಳೆದ ಉದಾಹರಣೆಗಳಿವೆ. ಅದಕ್ಕೆ ಬೆರಗಾಗಿದ್ದೇವೆ. ಅನೇಕ ಸಾರಿ ಮಕ್ಕಳಿಂದಲೇ ಅನೇಕ ವಿಚಾರಗಳನ್ನು ಕಲಿಯುತ್ತೇವೆ.

ವಿಪರ್ಯಾಸವೆಂದರೆ, ಯಾರೂ ಮಗುವನ್ನೂ ಒಂದು ಪುಟ್ಟವ್ಯಕ್ತಿ ಎಂದು ಭಾವಿಸುತ್ತಿಲ್ಲ. ಅವರಲ್ಲೂ ವಿಚಾರಗಳಿವೆ, ಭಾವನೆಗಳಿವೆ ಮತ್ತು ಅವರವೇ ಆದ ಕಲ್ಪನೆಗಳು ಇವೆ ಎಂದು ನಂಬಲು ನಾವು ಸಿದ್ಧರಿಲ್ಲ. ಮಗು ತನ್ನ ಸುತ್ತ ಮುತ್ತಲಿನ ಪರಿಸರ ಅವಲೋಕಿಸುತ್ತಾ, ಅದಕ್ಕೆ ಪೂರಕವಾಗಿ ತನ್ನದೇ ಆದ ಅಭಿಪ್ರಾಯದ ಮುಖಾಂತರ ಸ್ಪಂದಿಸುವ ಸಾಮರ್ಥ್ಯವನ್ನು ನಾವು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಅವರೊಳಗೂ ನೋವು, ಸಮಸ್ಯೆ, ದುಗುಡ, ತಳಮಳಗಳಿವೆ ಎಂಬುದರೆಡೆಗೆ ನಮಗೆ ಜಾಣ ಕುರುಡು ಮತ್ತು ಜಾಣ ಕಿವುಡು. ನಾವೂ ನಮ್ಮ ಭಾವನೆ, ಅಭಿಪ್ರಾಯಗಳನ್ನು, ನಮಗಿಷ್ಟವೆನಿಸಿದ್ದನ್ನು ಮಕ್ಕಳ ಮೇಲೆ ಸದಾ ಹೇರುವುದಕ್ಕೆ ಹೆಚ್ಚು ಆದ್ಯತೆ ನೀಡುತ್ತಿದ್ದೇವೆ.

ಮಕ್ಕಳಿಗೆ ಏನೂ ತಿಳಿದಿಲ್ಲ ಎಂಬ ನಿರ್ಣಯದೊಂದಿಗೆ ನಮ್ಮ ಶಿಕ್ಷಣದ ಬಹುತೇಕ ಚಟುವಟಿಕೆಗಳು ಪ್ರಾರಂಭವಾಗುತ್ತವೆ. ಅದರಲ್ಲೂ ವಿಶೇಷ ವೆಂದರೆ ಮಕ್ಕಳ ಶಿಕ್ಷಣದ ಎಲ್ಲಾವೂ ಹಿರಿಯರ ನೆಲೆಯಿಂದಲೇ ರೂಪಿಸಲ್ಪಡುತ್ತವೆ. ಅಲ್ಲಿ ಸಣ್ಣವರ ಆಲೋಚನೆಗಳಿಗಿಂತ ಹಿರಿಯೆ ಆಲೋಚನೆಗಳು, ಅಗತ್ಯಗಳು, ಆಶೆಗಳು, ಆಶೋತ್ತರಗಳು ಮಹತ್ವ ಪಡೆಯುತ್ತವೆ. ಮಕ್ಕಳ ಆಸಕ್ತಿ, ಅಭಿರುಚಿ, ಮನೋವಿಜ್ಞಾನವು ಮೂಲೆಗುಂಪಾಗಿರುತ್ತದೆ. ಚೈತನ್ಯದ ಚಿಲುಮೆಗಳಾಗಿರುವ ಮಕ್ಕಳು ಯಾವಾಗಲೂ ಒಂದೆಡೆ ಸುಮ್ಮನೆ ಕುಳಿತುಕೊಳ್ಳವ ಸ್ವಭಾವದವರಲ್ಲ. ಸದಾ ಅವರು ಒಂದು ಪ್ರಕ್ರಿಯೆ, ಚಟುವಟಿಕೆ, ಆಟಗಳಲ್ಲಿರಲು ಬಯಸುತ್ತಾರೆ. ಹಾಗಾಗಿ ಅವರ ಕಲಿಕೆ ಅಂತವುಗಳ ಮುಖಾಂತರವೇ ನಡೆಯುವುದು ಸೂಕ್ತ. ಅದನ್ನು ಗಮನಿಸಿ ಮಕ್ಕಳ ಪ್ರೀತಿಯ ಅಜ್ಜ 'ಕಾರಂತ'ರು 'ಓದುವ ಆಟ' ಎಂಬ ಪುಸ್ತಕದ ಮುಖಾಂತರ ಹೊಸ ಹಾದಿ ತುಳಿದರು. ಆದರೆ ಅದನ್ನು ನಾವು ಸ್ವೀಕರಿಸಿದ ಪರಿ ?.

ಕಲಿಕೆ ನಡೆಯುವುದೆಲ್ಲಾ ಶಾಲೆಯೊಳಗೆ ಮಾತ್ರ ಎಂಬ ತಪ್ಪು ಕಲ್ಪನೆ ನಮ್ಮಲ್ಲಿ ಬಲವಾಗಿ ಬೇರೂರಿದೆ. ಮಗು ಹುಟ್ಟಿದಂದಿನಿಂದಲೇ ಸುತ್ತಲ ಪರಿಸರದಿಂದ ಕಲಿಯಲಾರಂಭಿಸುತ್ತದೆ. ನೋಡುವ, ಕೇಳುವ ಮತ್ತು ಮಾಡುವ ತಂತ್ರಗಳ ಮುಖಾಂತರ ಬದುಕಿಗೆ ಅಗತ್ಯವಾದ ಕೌಶಲಕ್ಕೆ ಶಾಲೆಯ ಒಂದು ಖಚಿತತೆ ನೀಡಬೇಕು. ಈ ಅಮೂರ್ತಗಳಿಗೆ ಒಂದು ಮೂರ್ತ ಸ್ವರೂಪ ಕೊಡುವ ಕೊಡುವ ಕೆಲಸ ಶಾಲೆಯಲ್ಲಾಗಬೇಕು. ಅಂದರೆ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಕಾರ್ಯ ಅಲ್ಲಿ ನಡೆಯಬೇಕಾಗಿಲ್ಲ. ಬದಲಾಗಿ ಮಗುವಿನಲ್ಲಿ ಪ್ರಶ್ನೆಗಳನ್ನು ಮೂಡುವಂತೆ ಮಾಡಿದರೆ ಸಾಕು. ಯಾಕೆಂದರೆ ಉತ್ತರ ಹುಡುಕುವ ಕಾಯಕವನ್ನು ಮಗುವೇ ಮಾಡಿಕೊಳ್ಳುತ್ತಾ ಮುಂದಡಿ ಇಡುತ್ತದೆ. ಪ್ರತೀ ಮಗುವಿನಲ್ಲಿ ಕುತೂಹಲವು ರಕ್ತಗತವಾಗಿ ಬಂದಿರುತ್ತದೆ. ಚಿಕ್ಕ ಮಗುವೂ ಎಲ್ಲವನ್ನೂ ಅತ್ಯಂತ



ಕುತೂಹಲದಿಂದ ಪರಿಶೀಲಿಸುತ್ತಾ, ಅನುಭವಿಸುತ್ತಿರುತ್ತದೆ. ತನ್ನ ಕುತೂಹಲವನ್ನು ತಣಿಸಿಕೊಳ್ಳಲು ಶೋಧನೆಯತ್ತ ಮುಖ ಮಾಡುತ್ತದೆ. ಕುತೂಹಲ ಮತ್ತು ಸಂಶೋಧನೆಯ ಅಂಶಗಳು ಕಲಿಕೆಯಲ್ಲಿ ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸುವುದರಿಂದ, ಅವನ್ನು ಪ್ರೇರೇಪಿಸುವತ್ತ ನಮ್ಮ ಗಮನ ಕೇಂದ್ರೀಕರಿಸಬೇಕಿದೆ.

ಪ್ರಸ್ತುತ ನಮ್ಮ ಶಿಕ್ಷಣ ವ್ಯವಸ್ಥೆಯು ನೆನಪಿನ ಶಕ್ತಿ, ಪಠ್ಯದ ವಿಷಯ ಮತ್ತು ಅಂಕಗಳಿಗೆ ಮಾತ್ರ ಆದ್ಯತೆ ನೀಡುತ್ತಿದೆ. ಅದರಲ್ಲಿ ಮಗುವಿಗೆ ಅಕ್ಷರಗಳನ್ನು ನೆನಪಿಡುವುದು ಸುಲಭವಲ್ಲ. ಅದರಲ್ಲೂ ಅರ್ಥವಾಗದ ವಿಷಯಗಳನ್ನು ನೆನಪಿಡುವುದು ಮಗುವಿಗೆ ಆಸಕ್ತಿಯ ವಿಷಯವೂ ಅಲ್ಲ. ಮಗುವಿಗೆ ಒಂದು ವಿಷಯ ನಿಧಾನವಾಗಿ ಸ್ಪಷ್ಟವಾಗುತ್ತದೆ. ಹೇಳಿದ್ದನ್ನು ನೆನಪಿನಲ್ಲಿಡಬೇಕು. ಅದನ್ನೇ ಪರೀಕ್ಷೆಯಲ್ಲಿ ಹೇಳಬೇಕು, ಇಲ್ಲವೇ ಬರೆಯಬೇಕು. ಅಂದರೆ ಹೆಚ್ಚು ಮಾರ್ಕು ಬರುತ್ತವೆ. ಆಗ ಅಮ್ಮ ಅಪ್ಪ ಸಂತೋಷ ಪಡುತ್ತಾರೆ. ತನಗೆ ಪೆಟ್ಟು ಬೀಳುವುದಿಲ್ಲ. ಹಾಗಾಗಿ ನಮ್ಮ ಮಕ್ಕಳು ಕುತೂಹಲ ಮತ್ತು ಸಂಶೋಧನೆಗಳತ್ತ ತೊಡಗಿಕೊಳ್ಳದೇ ಮಾರ್ಕ್ಸವಾದದ ಪ್ರಯತ್ನದಲ್ಲಿಯೇ ತೊಡಗಿಕೊಳ್ಳುತಾರೆ. ಅರ್ಥವಾಗದಿದ್ದರೂ ವಿಷಯಗಳನ್ನು ನೆನಪಿನಲ್ಲಿ ತುರುಕಿಕೊಳ್ಳಲು ಪ್ರಾರಂಭಿಸುತ್ತಾರೆ. ದೊಡ್ಡವರ ಮೆಚ್ಚುಗೆ ಸಿಕ್ಕಂತೆಲ್ಲ ಹೆಚ್ಚು ಹೆಚ್ಚು ಮಾರ್ಕು ಪಡಿಯುವ ಹವ್ಯಾಸದಲ್ಲಿ ಬೀಳುತ್ತದೆ, ಬರುಬರುತ್ತಾ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕ ಪಡೆಯುವುದೇ ಜೀವನದ ಸಾಧನೆ ಎಂಬ ಭ್ರಮೆಯಲ್ಲಿ ಬದುಕುತ್ತಾರೆ. ಒಂದು ಪುಸ್ತಕದಲ್ಲಿ ಹಿರಿಯರೊಬ್ಬರು ಹೇಳಿದ ಮಾತು ಇಲ್ಲಿ ನೆನಪಾಗುತ್ತಿದೆ "ನಮ್ಮ ಮಕ್ಕಳು ಹುಟ್ಟುತ್ತಲೇ ವಿಜ್ಞಾನಿಗಳಾಗಿರುತ್ತಾರೆ. ಆದರೆ ನಾವು ಶಾಲೆಗೆ ಸೇರಿಸಿ ಅವರನ್ನು ಇಡಿಯಟ್‌ಗಳನ್ನಾಗಿ ಮಾಡುತ್ತಿದ್ದೇವೆ" ಎಂಬ ಮಾತುಗಳು ಇಂದಿನ ಸ್ಥಿತಿಗೆ ಕನ್ನಡಿಯಂತಿವೆ.

ವಿದ್ಯಾರ್ಥಿಯು ಶಾಲೆಯಲ್ಲಿ ಕಲಿಯುವ ವರ್ಷಗಳು ಬದುಕಿನುದ್ದಕ್ಕೂ ಆನಂದದ ನೆನಪಾಗಿ ಉಳಿಯಬೇಕು. ಇದು ಸಾಧ್ಯವಾಗಬೇಕಾದರೆ ಸ್ಪರ್ಧೆ ಇರಬಾರದು, ಅಧಿಕಾರಕೇಂದ್ರ ಇರಬಾರದು, ಶಿಕ್ಷಣ ಮತ್ತು ಕಲಿಕೆಗಳು ಅಖಂಡ ಪ್ರಕ್ರಿಯೆಗಳಾಗಬೇಕು. ಶಿಕ್ಷಣ ಪುಸ್ತಕಗಳಿಂದಷ್ಟೆ ಅಲ್ಲ, ನೆನಪಿನಂಗಳದಿಂದಷ್ಟೆ ಅಲ್ಲ, ನೋಡುವುದರಿಂದ, ಕೇಳುವುದರಿಂದ, ಪುಸ್ತಕಗಳು ಏನು ಹೇಳುತ್ತವೆ ಅವುಗಳಲ್ಲಿ ಸತ್ಯಾಂಶವೆಷ್ಟು, ಮಿಥ್ಯಾಂಶವೆಷ್ಟು ಎಂದೆಲ್ಲಾ ವಿವೇಚಿಸುವುದರಿಂದಲೂ ದೊರಕುತ್ತದೆ. ಶಾಲೆಯು ಮಕ್ಕಳ ದೃಷ್ಟಿಯಲ್ಲಿ ಹಿಂಸಾಲಯವಾಗಬಾರದು. ಹೂವಿನಂತ ಮಕ್ಕಳನ್ನು ಬಲವಂತದಿಂದ ಅರಳಿಸಬಾರದು. ಅವರು ಸಹಜವಾಗಿ ಅರಳಲು ಅವಕಾಶ ಕೊಡಬೇಕು. ಕಲಿಕೆ ಎನ್ನುವುದು ಅವರಿಗೆ ಆನಂದದಾಯಕ ಚಟುವಟಿಕೆಯಾಗಬೇಕು. ಅವರ ಮೆದುಳು ನಿರರ್ಥಕ, ನಿರುಪಯುಕ್ತ ಮಾಹಿತಿಗಳನ್ನು ಗುಡ್ಡೆ ಹಾಕುವ ಕಸದ ಬುಟ್ಟಿಯಲ್ಲ. ಯಾವುದು ಮಕ್ಕಳಿಗೆ ರುಚಿಸುವುದಿಲ್ಲವೋ, ಉಪಯುಕ್ತ ಎನಿಸುವುದಿಲ್ಲವೋ ಅವುಗಳ ಬಗ್ಗೆ ಅವರಿಗೆ ಆಸಕ್ತಿ ಇರುವುದಿಲ್ಲ. ಎಲ್ಲಿ ಆಸಕ್ತಿ ಇರುವುದಿಲ್ಲವೋ ಅಲ್ಲಿ ಕಲಿಕೆ ನಡೆಯುವುದಿಲ್ಲ ಎಂಬ ಅಂಶಗಳನ್ನು ಇನ್ನಾದರೂ ನಾವು ಅರ್ಥಮಾಡಿಕೊಳ್ಳಬೇಕಿದೆ.

ಮಕ್ಕಳಿಗೆ ಇಂದು ಏನೆಲ್ಲಾ ಅಗತ್ಯವಿದೆ? ಅವರಿಗೆ ವಿಭಿನ್ನವೂ, ವಿಶೇಷವೂ ಆದ ಹೊಸತೇನನ್ನು ಕೊಡಬಹುದು? ಅವರನ್ನು ಒಳಗೊಳ್ಳುವುದು ಹೇಗೆ? ಶೋಷಣೆಗೆ, ಅವಗಣನೆಗೊಳಗಾದ ಮಕ್ಕಳ ಸಮಸ್ಯೆಯ ಆಳ, ಅಗಲ, ವಿಸ್ತಾರಗಳೇನು? ಎಂಬುದರ ಕುರಿತು ಈಗಲಾದರೂ ನಾವು ಸರಿಯಾದ ದಿಕ್ಕಿನಲ್ಲಿ ಯೋಚಿಸದಿದ್ದರೆ ಮುಂದೆ ಅಪಾಯ ಕಾದಿದೆ. ಸಾಮಾನ್ಯವಾಗಿ ಪೋಷಕರು ತಮಗೆ ಸಾಧಿಸಲಾಗದ ಕನಸುಗಳನ್ನು ಮಕ್ಕಳ ಮೂಲಕ ಸಾಧಿಸಲು ಬಯಸುತ್ತಾರೆ. ತಮ್ಮ ಮಕ್ಕಳ ಸಾಧನೆಯ ಮೂಲಕ ಸಮಾಜದಲ್ಲಿ ಪುರಸ್ಕಾರ ಗೌರವಗಳನ್ನು ಪಡೆಯುವ ಆಸೆ ಹೊಂದಿರುತ್ತಾರೆ. ಆದರೆ ತಮ್ಮ ಅಗತ್ಯಗಳಿಗಾಗಿ, ತಮ್ಮ ಸಮಯದ ಚೌಕಟ್ಟಿನಲ್ಲಿ, ತಮಗೆ ಬೇಕಾಗ ಮಟ್ಟದಲ್ಲಿ, ಮಕ್ಕಳಲ್ಲಿ ವ್ಯಕ್ತಿತ್ವವನ್ನು ರೂಪಿಸುವ ಆತುರದ ಪ್ರಯತ್ನದಲ್ಲಿ, ಮಕ್ಕಳ ವಿಕಾಸದ ಮೇಲೆ ಆಗುತ್ತಿರುವ ಪರಿಣಾಮಗಳತ್ತ ಕಣ್ಣು ಹಾಯಿಸಿದರೆ ದೊಡ್ಡ ಆತಂಕ ಎದ್ದು ಕಾಣುತ್ತದೆ. ಅದು ಹೀಗೆಯೇ ಮುಂದುವರೆದರೆ ಮುಂದಿನ ಸಮಾಜ, ಪ್ರಜೆಗಳು ನಮ್ಮನ್ನು ಎಂದಿಗೂ ಕ್ಷಮಿಸುವುದಿಲ್ಲ. ಈಗ 2023 ಕೊನೆಗೊಳ್ಳುತ್ತಿದೆ. 2024ರಲ್ಲಾದರೂ ನಾವು ಜಾಗೃತರಾಗೋಣ.

# ಸರಳ ವಿವಾಹಗಳನ್ನು ಪ್ರೋತ್ಸಾಹಿಸಿ, ಆಡಂಬರದ ಮದುವೆ ದೂರಾಗಿಸಿ



ಜಿ ಆರ್ ಬಸವರಾಜೇಶ್ವರಿ
ಹಗರಿಗಜಾಪುರ

ಆಡಂಬರದ ಮದುವೆ ಮಾಡುವ ಬದಲು ಬದುಕಿನ ನಿಜವಾದ ಆಡಂಬರದ ಬಗ್ಗೆ ಇಂದಿನ ಯುವಪೀಳಿಗೆಗೆ ತಿಳಿಸುವ ಅಗತ್ಯ ಪ್ರಸ್ತುತ ಪರಿಸ್ಥಿತಿಗೆಯಿದೆ. ಅದಕ್ಕೆ ಒಂದು ಉದಾಹರಣೆ ಹೀಗೆ ಒಮ್ಮೆ ನಮ್ಮ ಆತ್ಮೀಯ ಸ್ನೇಹಿತ ಕುಟುಂಬದವರು ಬಹಳ ವರ್ಷಗಳ ನಂತರ ನಮ್ಮ ಮನೆಗೆ ಬಂದರು . ಅವರು ಇಂಜಿನಿಯರ್ ಆಗಿದ್ದು ವಿದೇಶದಲ್ಲಿ ನೆಲೆಸಿದ್ದರು ಹಾಗೂ ಅವರ ಮಗ ಕೂಡ ಇಂಜಿನಿಯರ್ ಆಗಿದ್ದು ಅಲ್ಲೇ ಕೆಲಸ ಕೂಡ ನಿರ್ವಹಿಸುತ್ತಿದ್ದರು. ಅವರು ನಮ್ಮ ದೇಶಕ್ಕೆ ಮತ್ತೆ ಹಿಂದಿರುಗಿ ಬಂದಿದ್ದ ಉದ್ದೇಶವನ್ನು ನಮ್ಮ ಮುಂದೆ ತಿಳಿಯಪಡಿಸಿದರು.ವಿದೇಶದಲ್ಲೂ ಸಾಕಷ್ಟು ಆಸ್ತಿ ಮಾಡಿದ್ದೇವೆ ತಮಗೆ ತಕ್ಕಂತಹ ಒಂದು ಹುಡುಗಿ ನೋಡಿ ನಮ್ಮ ಮಗನಿಗೆ ನಮ್ಮ ನಾಡಿನ ಹುಡುಗಿಯೊಂದಿಗೆ ಮದುವೆ ಮಾಡಬೇಕೆಂದು ಬಯಸಿದ್ದೇವೆ ಎಂದು ಮಾತು ಮುಂದುವರೆಸುತ್ತಾ ನಮಗೆ ಬೆಂಗಳೂರಿನ ಸಿಟಿಯಲ್ಲಿ ದೊಡ್ಡ ಚೌಟ್ರಿಯಲ್ಲಿ ಮದುವೆ ಮಾಡಿಕೊಡಬೇಕು, ಹುಡುಗಿಗೆ ಸುಮಾರು 2 ಕೆಜಿ ಬಂಗಾರ ಹಾಕಬೇಕು ಅಲ್ಲದೆ ನಮ್ಮ ಹುಡುಗನಿಗೆ ಒಂದು ಕೋಟಿ ವರದಕ್ಷಿಣೆ ಕೊಟ್ಟರೆ ಸಾಕು ಎಂದರು. ಅದಕ್ಕೆ ನಾನು ಅಲ್ಲಾ...ರೀ ಅಲ್ಲೇ ಯಾರಾದರೂ ಇದ್ದರೆ ನೋಡ್ಕೊಂಡು ಮದುವೆ ಮಾಡಿಸೋದು ಬಿಟ್ಟು ಇಲ್ಲಿಯವರೆಗೆ ಅದಕ್ಕೆ ಅಂತ ಯಾಕ್ ಬಂದ್ರಿ? ಅಲ್ಲದೆ ನೀವು ಹೇಳೋ ತರಹದ ಹುಡುಗಿಯರ ಕುಟುಂಬಗಳು ಮತ್ತು ದೊಡ್ಡ ಶ್ರೀಮಂತರ ಪರಿಚಯ ನಮಗಿಲ್ಲ ನೀವು ಬೇರೆ ಯಾರನ್ನಾದರೂ ಕೇಳಿ ನೋಡಿ ಎಂದೆ. ಅದಕ್ಕೆ ಅವರು ಇಲ್ಲ ಇಲ್ಲ ಅಷ್ಟು ಬೇಕು ಅಂತ ಕೇಳಲ್ಲ ಸ್ವಲ್ಪ ಹೆಚ್ಚು ಕಮ್ಮಿ ನಡಿಯುತ್ತೆ ನೋಡಿರಿ ಎಂದರು.

ಹಾಗಾದ್ರೆ ನೋಡಿ ನೀವು ನಮ್ಮ ದೇಶ ನಮ್ಮ ನಾಡು ಜನತೆಯ ಬಗ್ಗೆ ಇಷ್ಟೊಂದು ಅಭಿಮಾನವಿಟ್ಟು ಬಂದಿದ್ದಕ್ಕೆ ನಿಮಗೆ ತುಂಬಾ Thanks..ರೀ. ಆದರೆ ನಿಮಗೆ ಇನ್ನೊಂದು ಮಾತು ಹೇಳ್ತೀನಿ ಬೇಜಾರು ಮಾಡಿಕೊಳ್ಳಬೇಡಿ ಅದೇನಂದ್ರೆ...ಅಲ್ಲಿಂದ ನೀವು ಇಲ್ಲಿವರೆಗೂ ಈ ಮಣ್ಣಿನ ಹೆಣ್ಣು ಬೇಕೆಂದು ಬಂದಿದ್ದೀರಲ್ಲಾ?.. ಇದರಲ್ಲೇ ನೀವು ತಿಳ್ಕೊಬೇಕಾಗಿತ್ತು ನಿಮ್ಮ ಎಲ್ಲಾ ಆಸ್ತಿಗಳನ್ನು ತಂದು ಇಟ್ಟರೂ ಇಲ್ಲಿನ ಹೆಣ್ಣುಮಕ್ಕಳಿಗೆ ಸಮವಲ್ಲವೆಂದು. ಈ ರೀತಿಯ ವ್ಯವಹಾರದ ಮದುವೆಗಳ ಬಗ್ಗೆ ನನಗೆ ನಂಬಿಕೆ ಇಲ್ಲ. ತೊಗೊಳಿ ಕಾಫಿ ಕುಡಿರಿ ಮತ್ತೆ ಯಾವಾಗಲಾದರೂ ಈ ವಿಷಯದ ಬಗ್ಗೆ ಮತ್ತೆ ಮಾತಾನಾಡೋಣ ಎಂದು ನಿಧಾನವಾಗಿ ಅವರನ್ನು ಅಲ್ಲಿಂದ ಕಳುಹಿಸಿಕೊಟ್ಟೆವು.

ಅವರು ಹೋದ ಮೇಲೆ ಎದುರು ಮನೆಯಲ್ಲಿದ್ದ ದಂಪತಿಗಳು ಓಡೋಡಿ ಮನೆಗೆ ಬಂದು ಅವರು ಫಾರಿನ್ ನಿಂದ ಬಂದವರಲ್ಲವೇ? ಅವರ ಮಗ ಕೂಡ ಫಾರಿನ್ ನಲ್ಲಿ ಇದ್ದಾನಂತೆ ಅಲ್ಲವೇ? ಎಂದರು. ಹೌದು ಅವರು ಫಾರಿನ್ ನಿಂದಲೇ ಬಂದಿರುವುದು ಎಂದೇ. ಅದಕ್ಕೆ ಅವರು ಹಾಗಾದ್ರೆ ನಮ್ಮ ಒಬ್ಬಳೇ ಮಗಳನ್ನು ಅವರ ಮಗನಿಗೆ ಮದುವೆ ಮಾಡಿಸಲು ಮಾತನಾಡಬಹುದಿತ್ತಲ್ಲ ಎಂದರು. ಏನ್ರಿ ನಿಮಗೆ ಇರುವುದು ಒಬ್ಬಳೇ ಮಗಳು ಅವಳನ್ನು ಅಷ್ಟು ದೂರ ಕೊಡಬಹುದೇ?.. ಅಲ್ಲದೇ ಅವರ ಡಿಮ್ಯಾಂಡ್ ಕೇಳಿದರೆ ಈಗಲೇ ಹಾರ್ಟ್ ಅಟ್ಯಾಕ್ ಆಗುತ್ತೆ ಎಂದು ಎಲ್ಲವನ್ನೂ ವಿವರಿಸಿ ಹೇಳಿದೆ. ಪೆಚ್ಚು ಮೋರೆ ಹಾಕಿಕೊಂಡು ಇದು ನಮ್ಮಿಂದ ಸಾಧ್ಯವಾಗದು ಬೇರೆ ಯಾವುದಾದರೂ ಟುಜಜಟಜ ಛಿಟಛಿ ಜನರನ್ನು ನೋಡಿಎಂದರು. ಅಲ್ಲದೆ ನಿಮಗೆ ಏನೇನಿದೆ ಎಂದು ಒಮ್ಮೆ ಹೇಳಿ ನೋಡೋಣ ಎಂದೆ ಅದಕ್ಕೆ ಅವರು ನೋಡಿ ನಮ್ಮ ಮಗಳು ಓದಿದ್ದಾಳೆ ಕೆಲಸಕ್ಕೆ ಹೋಗ್ತಿದ್ದಾಳೆ ಸ್ವಂತ ಮನೆಯಿದೆ ಅಷ್ಟೇ. ಇನ್ನು ನಮಗೆ ಹಳ್ಳಿಯಲ್ಲಿ ಹೊಲದಲ್ಲಿ ಬರುವ ಆದಾಯ ನಮ್ಮ ಜೀವನಕ್ಕೆ ಸಾಕಾಗುತ್ತದೆ. ಏನಿಲ್ಲ ಅಂದ್ರು ವರ್ಷಕ್ಕೆ 50.000 ದುಡಿತೀವಿ ನೋಡ್ರಿ ಎಂದರು. ಆಗಿದ್ದ ಮೇಲೆ ನಿಮಗೆ ತಕ್ಕದಾದ ವರನನ್ನು ನೋಡಿ ನೀವು ಮತ್ತು ನಿಮ್ಮ ಮಗಳು ಇಬ್ಬರು ಸುಖವಾಗಿ ಇರುತ್ತೀರಿ ಸುಮ್ನೆ ದೊಡ್ಡ ಮನೆ ದೊಡ್ಡ ಶ್ರೀಮಂತರು ಅಂತ ಆಡಂಬರ ಮಾಡಿ ಇರುವ ಹೊಲ ಮನೆಯನ್ನು ಕಳೆದುಕೊಳ್ಳಬೇಕಾದಿತು. ಹುಡುಗಿಯ ತಂದೆ ನಮ್ ಕಷ್ಟ ಎಷ್ಟೇ ಇದ್ರೂ ಮಕ್ಕಳನ್ನ ನೌಕರಿ ಇರುವವರಿಗೆ ಕೊಟ್ಟು ಮದುವೆ ಮಾಡಿದರೆ ಅವರ ಬಾಳು ಬಂಗಾರವಾಗುತ್ತೆ ಅದಕ್ಕೆ ನಮ್ಮ ಮನೆ ಹಳ್ಳಿಯಲ್ಲಿರುವ ಹೊಲ ಎಲ್ಲವನ್ನು ಮಾರುತ್ತೀವಿ ಅಂದರು. ಅಲ್ಲಾರೀ ನೀವು ಏಕೆ ಹಾಸಿಗೆ ಇದ್ದಷ್ಟು ಕಾಲು ಚಾಚಬಾರದು. ನಿಮ್ಮ ಅತಿ ಆಸೆಗಳು ನಿಮ್ಮನ್ನು ಬೀದಿಗೆ ತಂದು ನಿಲ್ಲಿಸುತ್ತದೆ ಬದಲಾಗಿ ನಿಮಗೆ ಅನುಕೂಲವಾದ ಒಳ್ಳೆ ಹುಡುಗನನ್ನು ನೋಡಿ ಮದುವೆ ಮಾಡಿ ಏಕೆಂದರೆ ಹಣ ಆಸ್ತಿ ದುಡಿಮೆಯಿದೆ ಎಂದು ಕೊಟ್ಟರೆ ಕೆಲವರು ಅವುಗಳನ್ನು ತಮ್ಮ ಮಜಾ ಮೋಜುಗಳಿಗೆ ಬಳಸಿ ಇತ್ತ ಅಪ್ಪ ಅಮ್ಮರಿಗೆ ಒಳ್ಳೆಯ ಮಕ್ಕಳೂ ಆಗದೆ ಕುಟುಂಬಕ್ಕೆ ಒಳ್ಳೆಯ ನೆಮ್ಮದಿ ಇಲ್ಲದಂತೆ ಮಾಡುತ್ತಾರೆ ಅದಕ್ಕೆ ಬದಲಾಗಿ ದುಡಿಮೆ ಕಡಿಮೆ ಇದ್ದರೂ ಪರವಾಗಿಲ್ಲ ಗುಣವಂತರನ್ನು ನೋಡಿ ಮಾಡಿ ಅವರ ಜೀವನ ಕೂಡ ಚೆನ್ನಾಗಿರುತ್ತೆ ಮುಂದೆ ಅವರು ಕೂಡ ನಿಮ್ಮ ಕಷ್ಟ ಸುಖಗಳಲ್ಲೂ ಸಹಾಯ ಮಾಡುತ್ತಾರೆ.ಅಲ್ಲದೆ ಬರುವ ಅಳಿಯನನ್ನು ಮಗನಂತೆ ಕಾಣಿರಿ ಅದೇ ರೀತಿ ಹೊರಗಿನಿಂದ ಬರುವ ಸೊಸೆಯನ್ನು ಮಗಳೆಂದು ಭಾವಿಸಿ ಆಗ ಜೀವನ ಎಷ್ಟು ಚೆನ್ನಾಗಿರುತ್ತದೆ ಎಂದು ಯೋಚಿಸಿ ನೋಡಿರಿ ಎಂದೇ. ಆಯಿತು ನೀವು ಹೇಳಿದಂತೆ ಆಗಲಿ ಅಂತಹ ವರನನ್ನು ನೋಡಿ ನಮಗೆ ತಿಳಿಸಿ ಎಂದು ಅಲ್ಲಿಂದ ಹೊರಟರು.




ಆತ್ಮೀಯರೇ ಮದುವೆ ಎಂಬ ಮೂರು ಗಂಟಿನ ನಂಟು ಮೂರು ಜನ್ಮಕ್ಕೂ ಇರುತ್ತದೆ ಎಂಬ ನಂಬಿಕೆ ಮೊದಲಿನಿಂದಲೂಯಿದೆ. ಎಲ್ಲವೂ ಋಣಾನುಬಂಧವಿದ್ದಂತೆ ಅದನ್ನು ಅರಿತವರು ಪಾಲಿಗೆ ಬಂದಿದ್ದು ಎಂದು ತಿಳಿದುಕೊಂಡು ಎಲ್ಲಾ ಕಷ್ಟ ಸುಖಗಳನ್ನು ಸಮಾನತೆಯಿಂದ ಹಂಚಿಕೊಳ್ಳುತ್ತಾರೆ. ಇಲ್ಲಿ ಬಡವ ಶ್ರೀಮಂತಿಕೆಯ ಅವಶ್ಯಕತೆ ಇರುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಆಸ್ತಿ ಹಣಕ್ಕೆ ಬೆಲೆ ಕೊಡುವವರನ್ನು ಮದುವೆಯಾಗುವ ಹೆಣ್ಣು ಮಕ್ಕಳು ಮತ್ತು ತಂದೆ ತಾಯಿಗಳೇ ತಿರಸ್ಕರಿಸುತ್ತಿದ್ದಾರೆ.

ಹೀಗಿರುವಾಗ ಮದುವೆ ಎನ್ನುವ ಹೆಸರಿನಲ್ಲಿ ನಡೆಯುವ ವ್ಯವಹಾರಗಳು ಎಷ್ಟು ಸರಿ ನೀವೇ ಯೋಚಿಸಿ? ಇಂತಹ ಆಡಂಬರದ ಮದುವೆಯೆಂಬ ಪದ್ಧತಿಗಳನ್ನು ನಿಲ್ಲಿಸಬೇಕಾದರೆ ಹೆಚ್ಚು ಹೆಚ್ಚು ಜನರು ಶಿಕ್ಷಣವನ್ನು ಕಲಿತು ವಿದ್ಯಾವಂತರಾಗಬೇಕು. ಇಲ್ಲಿ ಗಂಡು– ಹೆಣ್ಣು ಇಬ್ಬರೂ ಸಮಾನರು ಯಾರು ಹೆಚ್ಚಲ್ಲಾ ಯಾರು ಕಡಿಮೆಯಲ್ಲಾ ಇಬ್ಬರಿಗೂ ಸಮಾನವಾದಂತಹ ಸ್ಥಾನಮಾನಗಳು ಇವೆ. ಇಂತಹ ಆಡಂಬರದ ಬದಲಾಗಿ ಸರಳ ವಿವಾಹಕ್ಕೆ ಪ್ರೋತ್ಸಾಹಿಸಿ. ಆಡಂಬರ ಎಂಬುದು ಮದುವೆ ಮಾಡುವುದರಲ್ಲಿಲ್ಲ ಬದಲಾಗಿ ಉತ್ತಮ ಜೀವನ ನಡೆಸುವುದರಲ್ಲಿದೆ. ಮದುವೆಯಾಗುವ ಗಂಡು ಹೆಣ್ಣಿಗೆ ಸಂಸಾರ ನಡೆಸಲು ತಾಳ್ಮೆಯಿರಬೇಕು ಎಂಬುದನ್ನು ಮನಗಾಣಬೇಕು.ಅಲ್ಲದೇ ಎಂಥಹ ಕಷ್ಟಬಂದರೂ ಪ್ರೀತಿಯಿಂದ ಧೈರ್ಯದಿಂದ ಎದುರಿಸಿ ಎಂಬ ದಾರಿಯನ್ನು ಹಾಕಿಕೊಡಿ . ಆಡಂಬರ ಇರುವುದು ಮೆರೆಯಲು ಅಲ್ಲ ಬದಲಾಗಿ ಸರಳ ವಿವಾಹ ಮಾಡಿಕೊಂಡು ಒಬ್ಬರಿಗೆ ಮಾದರಿಯಾಗುವಂತೆ ಬಾಳಿ ತೋರಿಸಿ ಆಗಲಾದರೂ ಇಂತಹ ಮದುವೆಗಳಿಗೆ ಕಡಿವಾಣ ಬೀಳುತ್ತದೆ ಅಲ್ಲವೇ?... ಯೋಚಿಸಿ.. ಮಾದರಿಯಾಗಿ

**ಕವಿ ಮನಸು**

## ವಿಶ್ವಮಾನವನಿಗೆ ನಮ್ಮ ನುಡಿ ನಮನ



ತಂದೆ ತಾಯಿಗೆ ನೀ ನೆಚ್ಚಿನ ಪುಟ್ಟಪ್ಪ.
ತಾವು ಬರೆದ ಕಾವ್ಯಗಳಲ್ಲಿ ಜೀವ ತುಂಬಿ
ತೋರುವಿರಿ ಅಮೃತತ್ವದ ಸಾರಾವಪ್ಪ.

20ನೇ ಶತಮಾನ ಕಂಡ ದೈತ್ಯ ಪ್ರತಿಭೆ.
ರಸಋಷಿಯ ಸಾಹಿತ್ಯ ತಪಸ್ಸಿಗೆ ಅರಳಿತು
ಶ್ರೀ ರಾಮಾಯಣ ದರ್ಶನಂ ಎಂಬ ಪ್ರಭೆ.

ಮರೆಯಲಾಗದು ಯುಗದ ಕವಿ
ಪರಿಕಲ್ಪನೆಯ
ಮಂತ್ರ ಮಾಂಗಲ್ಯ ಸರಳ ವಿವಾಹ ಪದ್ಧತಿ.
ಕಟ್ಟಿ ಬೆಳೆಸಿದ್ದ ಕನಸಿನ ಕೂಸಾದ ಮಾನಸ
ಗಂಗೋತ್ರಿ.

ನೀವು ನಮ್ಮ ದೇಶ ಕಂಡ ಕರ್ನಾಟಕ ರತ್ನ.
ವಿಶ್ವಮಾನವ ಸಂದೇಶ ಸಾರಿದ ಜಗದ
ಕವಿ.
ಸಾಹಿತ್ಯ ಆಸಕ್ತರ ಲೋಕಕ್ಕೆ ಸದಾ ಬೆಳಗುವ
ರವಿ.

– **ಮಂಜುಶ್ರೀ ಮುರಳೀಧರ್.**
ತೋರಣಗಲ್ಲು, ಬಳ್ಳಾರಿ.

**ಸುದ್ದಿ–ಜಾಹೀರಾತಿಗಾಗಿ**
ಸಂಪರ್ಕಿಸಿ:
ಕಚೇರಿ ವಿಳಾಸ :
**ಹಂಪಿ ಟೈಮ್ಸ್
ವಾಲ್ಮೀಕಿ ಸರ್ಕಲ್ ಹತ್ತಿರ,
ಬಂಬೂ ಬಜಾರ್,
ಹೊಸಪೇಟೆ–583201
ವಿಜಯನಗರ ಜಿಲ್ಲೆ,
ಮೊ:9448633038**

**ಮಕ್ಕಳು ಅರಸರಾಗಬೇಕೆ?**
ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

**ತುಂಗಭದ್ರಾ ನೀರಿನ ಮಟ್ಟ**



| ಶುಕ್ರವಾರ : 29-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1589.14 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 1709 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.327 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1625.36 ಅಡಿ |
| ಒಳ ಹರಿವು | 635 ಕ್ಯುಸೆಕ್ |
| ಹೊರ ಹರಿವು | 8830 ಕ್ಯುಸೆಕ್ |
| ಸಾಮರ್ಥ್ಯ | 77.675 ಟಿಎಂಸಿ |

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ರಾಜಧಾನಿಯಲ್ಲಿ ಕರ್ಣನಿಗೇಕಿಲ್ಲ ಅಂಗೈಯಗಲ ಜಾಗ ?

## ಇಂದು ಡಾ. ವಿಷ್ಣುವರ್ಧನ ಅವರ 14ನೇ ವರ್ಷದ ಪುಣ್ಯಸ್ಮರಣೆ

ಶ್ರೀರಾಮಚಂದ್ರನ ವನವಾಸಕ್ಕೂ ಒಂದು ಅಂತ್ಯವಿತ್ತು. ಡಾ.ವಿಷ್ಣುವರ್ಧನ್ ಅವರ ಅಭಿಮಾನಿಗಳ ನೋವಿಗೆ ........ ಅಂತ್ಯವಿಲ್ಲವಾ?
ಭಾರತೀಯ ಸಿನಿಮಾ ರಂಗದ ಹೆಸರಾಂತ ನಟ, ಮೇರು ವ್ಯಕ್ತಿತ್ವದ ಕಲಾವಿದರಾಗಿದ್ದ ಡಾ.ವಿಷ್ಣುವರ್ಧನ್ ಅವರು ನಮ್ಮನ್ನಗಲಿ ಭರ್ತಿ ಹದಿನಾಲ್ಕು ವರ್ಷಗಳು. ಬದುಕಿನುದ್ದಕ್ಕೂ ಕಲಾರಸಿಕರನ್ನು ಮನರಂಜಿಸುತ್ತಾ, ನಾಡು ನುಡಿ ರಕ್ಷಣೆಗಾಗಿ ಸದಾ ಸಿದ್ಧರಾಗಿದ್ದ ಡಾ.ವಿಷ್ಣುವರ್ಧನ್ ಅವರು ಅಗಲಿ ಡಿಸೆಂಬರ್ 30ಕ್ಕೆ ಒಂದೂವರೆ ದಶಕ ಕಳೆದರೂ, ಇಂದಿಗೂ ಅವರು ನೋವಿನಿಂದ ಮುಕ್ತವಾಗಿಲ್ಲ ಎನ್ನುವುದು ನಾಡಿಗೆ ನಾಡೇ ತಲೆತಗ್ಗಿಸಬೇಕಾದ ಸಂಗತಿ. ಶ್ರೀರಾಮಚಂದ್ರನ ವನವಾಸಕ್ಕೂ ಒಂದು ಅಂತ್ಯವಿತ್ತು. ಆದರೆ ಡಾ.ವಿಷ್ಣುವರ್ಧನ್ ಅವರ ಪುಣ್ಯಭೂಮಿ (ಸಮಾಧಿ) ವಿವಾದಕ್ಕೆ ಇದುವರೆಗೂ ಅಂತ್ಯ ಕಾಣಲಿಲ್ಲ ಎನ್ನೋದು ಅತ್ಯಂತ ನೋವಿನ ಸಂಗತಿ. ಏನಾಯಿತು ಪುಣ್ಯಭೂಮಿಗೆ? ಎಲ್ಲರದ್ದೂ ಬಿಲಿಯನ್ ಡಾಲರ್ ಪ್ರಶ್ನೆ. ಉತ್ತರ ಸಿಂಪಲ್.

ಹಿರಿಯ ಕಲಾವಿದ ಬಾಲಕೃಷ್ಣ ಅವರಿಗೆ ಸರ್ಕಾರ ಅನುದಾನವಾಗಿ ನೀಡಿರುವ ಜಾಗವೇ ಅಭಿಮಾನ್ ಸ್ಟುಡಿಯೋ. ಕನ್ನಡ ಸಿನಿಮಾಗಳ ನಿರ್ಮಾಣಕ್ಕೆ ಕನ್ನಡಿಗರು ಮದರಾಸಿಗೆ ಹೋಗುವ ಅನಿವಾರ್ಯತೆಯ ದಿನಗಳವು. ಇದನ್ನು ತಪ್ಪಿಸಬೇಕು ಎಂದು ಬಾಲಣ್ಣನವರು ಸರ್ಕಾರದ ಬಳಿ ಇಪ್ಪತ್ತು ಎಕರೆ ಜಾಗವನ್ನು ಅನುದಾನವಾಗಿ ಪಡೆದು ಅಭಿಮಾನ್ ಸ್ಟುಡಿಯೋ ನಿರ್ಮಿಸಿದ್ದರು. ತಕ್ಕ ಮಟ್ಟಿಗೆ ಬಾಲಕೃಷ್ಣ ಅವರ ಕನಸು ಈಡೇರಿತ್ತು. ಆದರೆ ಅವರ ಅಗಲಿಕೆಯ ನಂತರ 2004ರಲ್ಲಿ ಅವರ ಮಕ್ಕಳು ಅಪ್ಪನ ಆಸೆಯನ್ನೇ ಮುಂದುವರೆಸಿಕೊಂಡು ಹೋದರಾ? ಅಭಿಮಾನ ಸ್ಟುಡಿಯೋವನ್ನು ಒಂದು ಸಲ ಪರಿಶೀಲಿಸಿದರೆ ಬೇರೆಯದ್ದೇ ಉತ್ತರ ಸಿಗುತ್ತದೆ.

ಸರಕಾರ ನೀಡಿದ್ದ 20 ಎಕರೆಯಲ್ಲಿ ಹತ್ತು ಎಕರೆ ಜಾಗವನ್ನು ಈಗಾಗಲೇ ಬಾಲಣ್ಣನವರ ಮಕ್ಕಳು ಮಾರಾಟ ಮಾಡಿ ಜೇಬು ತುಂಬಿಸಿಕೊಂಡಿದ್ದಾರೆ. ಅಭಿಮಾನ್ ಸ್ಟುಡಿಯೋ ಪಕ್ಕದಲ್ಲಿಯೇ ಇರುವ ಬಡಾವಣೆ ಸರ್ಕಾರದ ಅನುದಾನಿತ ಜಾಗ. ದಿ.ಬಾಲಕೃಷ್ಣ ಅವರ ಮಗಳು, ಮಹಿಳಾ ಉತ್ತರಾಧಿಕಾರಿ ಕಾಯ್ದೆ ಅನ್ವಯ ಬಡಾವಣೆ ನಿರ್ಮಾಣಕ್ಕಾಗಿ ಮಾರಾಟವಾದ ಭೂಮಿಯ ಹಣದಲ್ಲಿ ನನಗೂ ಪಾಲು ಬೇಕು ಅಥವಾ ಉಳಿದ ಹತ್ತು ಎಕರೆಗೆ ನನ್ನನ್ನೂ ಉತ್ತರಾಧಿಕಾರಿ ಯನ್ನಾಗಿಸಬೇಕು ಎಂದು ಕೋರಿ 2004 ರಲ್ಲಿ ಕೋರ್ಟಿನಲ್ಲಿ ಮೊಕದ್ದಮೆಯನ್ನು ಹೂಡಿದ್ದರು. ಈ ಕೌಟುಂಬಿಕ ಮೊಕದ್ದಮೆ ಕೋರ್ಟಿನಲ್ಲಿರುವಾಗಲೇ ಅಂದರೆ 2009 ರಲ್ಲಿ ಡಾ.ವಿಷ್ಣುವರ್ಧನ್ ಅವರು ನಮ್ಮನ್ನಗಲಿದರು.

ಅವರ ಅಂತ್ಯಸಂಸ್ಕಾರ ಎಲ್ಲಿ ಮಾಡಬೇಕು ಎಂಬ ಚರ್ಚೆಗಳು ನಡೆಯುತ್ತಿದ್ದಾಗ ದಿ.ಬಾಲಕೃಷ್ಣ ಅವರ ಮಗ ಗಣೇಶ್ ಅವರೇ ಮುಂದೆ ಬಂದು ಅಭಿಮಾನ್ ಸ್ಟುಡಿಯೋದಲ್ಲಿಯೇ ಅಂತ್ಯಸಂಸ್ಕಾರ ಮಾಡಿ ಎಂದು ಒಪ್ಪಿಗೆಯನ್ನು ಸೂಚಿಸಿದರು. ನಂತರ ಸರ್ಕಾರ ಆ ಜಾಗದ ಪೂರ್ವಾಪರ ವಿಚಾರಿಸದೆಯೇ ಅಂತ್ಯಸಂಸ್ಕಾರ ನೆರವೇರಿಸಿಬಿಟ್ಟಿತು. ಅಲ್ಲಿಂದಾಚೆಗಷ್ಟೇ ಆ ಅಭಿಮಾನ್ ಸ್ಟುಡಿಯೋ ಸುತ್ತ ಇರುವ ವಿವಾದಗಳು, ಅವರು ಭೂಮಿಯನ್ನು ಮಾರಾಟ ಮಾಡಿಕೊಂಡಿರುವುದು, ನ್ಯಾಯಾಲಯದ ಮೊಕದ್ದಮೆ ದಾಖಲಿಸಿರುವ ಸಂಗತಿಗಳು ನಾಡಿನ ಜನರಿಗೆ ಅರಿವಾದದ್ದು. ದಿ.ಬಾಲಣ್ಣನವರ ಕುಟುಂಬದವರ ಜೊತೆ ದಿ.ಅಂಬರೀಷ್ ಅವರು, ಚಿತ್ರರಂಗದವರು, ಡಾ.ವಿಷ್ಣು ಕುಟುಂಬದವರು, ಜಿಲ್ಲಾಧಿಕಾರಿ ಸೇರಿದಂತೆ ಹತ್ತಾರು ಸಂಧಾನ ಸಭೆಗಳು ಆದರೂ ಅವರು ಯಾವ ಸಂಧಾನಕ್ಕೂ ಬಾರದೇ ಹೋದರು.

ಸ್ಟುಡಿಯೋ ನಿರ್ಮಾಣಕ್ಕೆ ಸರ್ಕಾರ ನೀಡಿದ ಇಪ್ಪತ್ತು ಎಕರೆಯಲ್ಲಿ ಹತ್ತು ಎಕರೆಯನ್ನು ಬಡಾವಣೆ ನಿರ್ಮಾತೃಗಳಿಗೆ ಮಾರಾಟ ಮಾಡಲಾಗಿದೆ. ಹೀಗೆ ಮಾಡಿದ ದಿ.ಬಾಲಕೃಷ್ಣ ಅವರ ಕುಟುಂಬದವರ ನಡೆಯನ್ನು ಅಂದಿನ ಜಿಲ್ಲಾಧಿಕಾರಿಗಳಾದ ಶಂಕರ್ ಅವರು ಶೋಕಾಸ್ ನೋಟೀಸ್ ನೀಡಿ ಪ್ರಶ್ನಿಸಿದ್ದರು. ಅವರು ಸೂಕ್ತ ಉತ್ತರ ನೀಡದ ಹಿನ್ನಲೆಯಲ್ಲಿ ಉಳಿದ ಹತ್ತು ಎಕರೆ ಮುಟ್ಟುಗೋಲಿಗೂ ಆದೇಶಿಸಿದ್ದರು. ಆಗ ಆ ಕುಟುಂಬದವರು ಸಂಧಾನಕ್ಕೆ ಬಂದರಾದರೂ



ನಂತರದಲ್ಲಿ ಕೋರ್ಟಿನ ಮೂಲಕ ತಡೆಯಾಜ್ಞೆಯನ್ನು ತಂದು ಮುಟ್ಟುಗೋಲು ಆದೇಶವನ್ನು ಪ್ರಶ್ನಿಸಿದ್ದರು.

ಹೀಗೆ, ಏಳು ವರ್ಷಗಳ ಕಾಲ ಕಾದರೂ ಬೆಂಗಳೂರಿನಲ್ಲಿ ಸ್ಮಾರಕ ನಿರ್ಮಾಣ ಸಾಧ್ಯವಾಗದ ಹಿನ್ನಲೆಯಲ್ಲಿ ಡಾ.ವಿಷ್ಣು ಕುಟುಂಬದವರು ಮೈಸೂರಿನಲ್ಲಿ ಸ್ಮಾರಕ ನಿರ್ಮಾಣಮಾಡುವ ನಿರ್ಧಾರ ತಾಳಿದರು. ಆದರೆ ಇತ್ತ ಅಭಿಮಾನಿಗಳು ಅಂತ್ಯಸಂಸ್ಕಾರಗೊಂಡ ಜಾಗದಲ್ಲಿಯೇ ಪುಣ್ಯಭೂಮಿಯಾಗಬೇಕು ಎಂದು ಹಠವಿಡಿದು ಕೂತುಬಿಟ್ಟರು. ಇಂದಿಗೂ ಅಭಿಮಾನಿಗಳೇ ಪ್ರತಿವರ್ಷ ಅವರ ಹುಟ್ಟುಹಬ್ಬ ಮತ್ತು ಪುಣ್ಯಸ್ಮರಣೆಯನ್ನು ಆಚರಿಸಿಕೊಂಡು ಬರುತ್ತಿದ್ದಾರೆ.

ಡಾ.ವಿಷ್ಣುವರ್ಧನ್ ಅವರ ಸ್ಮಾರಕ ಮೈಸೂರಿನಲ್ಲಿ ಲೋಕಾರ್ಪಣೆಗೊಂಡಿದ್ದರೂ ಇಂದಿಗೂ ನಾಡಿನ ಪ್ರತಿ ಅಭಿಮಾನಿಯೂ 'ಅಭಿಮಾನ್ ಸ್ಟುಡಿಯೋ'ದಲ್ಲಿಯೇ ಡಾ.ವಿಷ್ಣು ಇರುವಿಕೆಯನ್ನು ನಂಬಿದ್ದಾರೆ. ಅದಕ್ಕೆ ಸಾಕ್ಷಿ ಎನ್ನುವಂತೆ ಕಳೆದ ವರ್ಷ ಡಾ.ವಿಷ್ಣು ಕಟೌಟ್ ಜಾತ್ರೆಗೆ ಸುಮಾರು ಎರಡೂವರೆ ಲಕ್ಷ ಜನ ಅಭಿಮಾನ್ ಸ್ಟುಡಿಯೋಗೆ ಬಂದಿದ್ದರೆಂಬುದು ಇಂಟರ್ ನ್ಯಾಷನಲ್ ಬುಕ್ ಆಫ್ ರೆಕಾರ್ಡ್ಸ್ ನಲ್ಲಿ ದಾಖಲಾಗಿದೆ. ಅವರ ಪ್ರತಿ ಹುಟ್ಟುಹಬ್ಬ ಮತ್ತು ಪುಣ್ಯಸ್ಮರಣೆಯ ದಿನಗಳಂದು ಇಂದಿಗೂ ಐವತ್ತು ಸಾವಿರಕ್ಕೂ ಹೆಚ್ಚು ಜನ ಡಾ.ವಿಷ್ಣುವರ್ಧನ್ ಅವರ ಪುಣ್ಯಭೂಮಿಗೆ ಬಂದು ದರ್ಶನಮಾಡಿ ಹೋಗುತ್ತಿದ್ದಾರೆ. ಸ್ಮಾರಕ ಎಲ್ಲೇ ಇರಲಿ, ಪುಣ್ಯಭೂಮಿ ಮಾತ್ರ ಅಂತ್ಯಸಂಸ್ಕಾರಗೊಂಡ ಜಾಗದಲ್ಲಿಯೇ ಇರಲಿ ಎಂಬ ಮನೋಭಾವ ಪ್ರತಿ ಅಭಿಮಾನಿಯದು.

ತನ್ನ ನೆಚ್ಚಿನ ನಾಯಕ ಪುಣ್ಯಭೂಮಿಯನ್ನು ಸ್ಪರ್ಶಿಸಲು ಅವಕಾಶ ನೀಡುತ್ತಿಲ್ಲ ದಿ.ಬಾಲಕೃಷ್ಣ ಅವರ ಕುಟುಂಬ. ಈವರೆಗೂ ಅಭಿಮಾನಿಗಳ ನಿತ್ಯದ ದರ್ಶನಕ್ಕೆ, ಹುಟ್ಟುಹಬ್ಬ, ಪುಣ್ಯಸ್ಮರಣೆಗೆ ಅವಕಾಶ ಮಾಡಿಕೊಡುತ್ತಿದ್ದ ದಿ.ಬಾಲಕೃಷ್ಣ ಅವರ ಕುಟುಂಬ ಇದೀಗ ಅನುಮಾನಾಸ್ಪದ ರೀತಿಯಲ್ಲಿ ವರ್ತಿಸುತ್ತಿದೆ. ಪ್ರತಿನಿತ್ಯ ಐನೂರಕ್ಕೂ ಹೆಚ್ಚು ಜನ ದರ್ಶನಕ್ಕಾಗಿ ಬರುತ್ತಿದ್ದಾರೆ. ಆದರೆ ಅವರ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಕಳೆದ ಪುಣ್ಯಸ್ಮರಣೆ ದಿನದಂದು ಹೂವಿನ ಅಲಂಕಾರ ಮಾಡಲೂ ಅವಕಾಶ ನೀಡಿರಲಿಲ್ಲ. ತಿಂಗಳ ಹಿಂದೆಯಷ್ಟೇ ಡಾ.ವಿಷ್ಣುವರ್ಧನ್ ಅವರ ತಲೆಭಾಗದಲ್ಲಿ ಇಟ್ಟಿದ್ದ ಅವರ ಫೋಟೋವನ್ನು ಮಟಮಟ ಮಧ್ಯಾಹ್ನವೇ ಎತ್ತಿ ಆಚೆಗಿಟ್ಟುಬಿಟ್ಟಿದ್ದರು. ಈ ಎಲ್ಲಾ ಹಿನ್ನೆಲೆಯಲ್ಲಿ ದಿ.ಬಾಲಕೃಷ್ಣ ಅವರ ಮಕ್ಕಳ ನಡೆಯನ್ನು ನಾವು ಅನುಮಾನಿಸುವಂತಾಗಿದೆ. ಅವರು ಈ ಅಭಿಮಾನ್ ಸ್ಟುಡಿಯೋವನ್ನು ವಾಣಿಜ್ಯಾತ್ಮಕ ಉದ್ದೇಶಗಳಿಗೆ ಬಳಸುವ ಹುನ್ನಾರ ನಡೆಸುತ್ತಿದ್ದಾರೆಂದು ಅಭಿಮಾನಿ ವಲಯದಲ್ಲಿ ಚರ್ಚೆಗಳಾಗುತ್ತಿವೆ. ಡಾ.ವಿಷ್ಣುವರ್ಧನ್ ಅವರ ಪುಣ್ಯಭೂಮಿಯನ್ನು ನೆಲಸಮ ಮಾಡುವ ಉದ್ದೇಶದಿಂದ ದಿನಕ್ಕೊಂದು ಕ್ಯಾತೆ ತಗೆಯುತ್ತಿದ್ದಾರೆ ಬಾಲಣ್ಣ ಕುಟುಂಬ. ಸರಕಾರಕ್ಕೆ ಈ ಎಲ್ಲ ವಿಷಯ ಗೊತ್ತಿದ್ದರೂ, ಅಭಿಮಾನಿಗಳು ಈಗಾಗಲೇ ಗಮನಕ್ಕೆ ತಂದಿದ್ದರೂ, ಸರ್ಕಾರ ಇನ್ನೂ ಸುಮ್ಮನಿರುವುದು ನಿಜಕ್ಕೂ ಆತಂಕದ ವಿಷಯ.

ರಾಜಧಾನಿಯಲ್ಲಿ ಪರಭಾಷಿಕರ ಭವನಗಳಿಗೆ, ಕೈಗಾರಿಕೆಗಳಿಗೆ, ವಿವಿದೋದ್ದೇಶಗಳಿಗೆ ಎಕರೆಗಟ್ಟಲೆ ಜಮೀನನ್ನು ಧಾರೆಯೆರೆಯತ್ತಿರುವ ಸರ್ಕಾರಗಳು ಕನ್ನಡದ ಮೇರುನಟನ ಸಮಾಧಿಗೆ ಬೇಕಾದ ಅಂಗೈಯಗಲ ಜಾಗ ನೀಡಲು ಸೋತಿರುವುದು ನಿಜಕ್ಕೂ ನೋವಿನ ವಿಷಯ. ಒಂದು ವೇಳೆ ಒಬ್ಬ ನಟನಿಗೆ ಬೆಂಗಳೂರು, ಮೈಸೂರು ಎರಡೆರಡು ಕಡೆ ಭೂಮಿ ಕೊಡುವುದು ಕಷ್ಟವೆನ್ನುವುದಾದರೆ,ಬೆಂಗಳೂರಿನಲ್ಲಿರುವಡಾ.ವಿಷ್ಣುವರ್ಧನ್ ಅವರ ಸಮಾಧಿ ಇರುವ ಭೂಮಿಯ ವೆಚ್ಚವನ್ನು ಅಭಿಮಾನಿಗಳಾದ ನಾವೇ ಸರ್ಕಾರದ ಖಜಾನೆಗೆ ಅಥವಾ ದಿ.ಬಾಲಕೃಷ್ಣ ಅವರ ಕುಟುಂಬದ ಖಾತೆಗೆ ನೀಡಲು ಸಿದ್ಧರಿದ್ದೇವೆ. ಹೇಳಿ ಕೇಳಿ ಅಭಿಮಾನಿಗಳು ಭಾವುಕರು. ಒಂದು ವೇಳೆ ದಿ.ಬಾಲಕೃಷ್ಣ ಅವರ ಕುಟುಂಬದವರು ದುರುದ್ದೇಶದಿಂದ ಸಮಾಧಿ ಸ್ಥಳವನ್ನು ತೆರವುಗೊಳಿಸಿದರೆ ಮುಂದೆ ಆಗುವ ಜೀವಹಾನಿಗೆ ಸರ್ಕಾರವೇ ಹೊಣೆ ಆಗಬೇಕಾಗುತ್ತದೆಯಲ್ಲವೇ? ಅದಕ್ಕೂ ಮುಖ್ಯವಾಗಿ ಕಲಾವಿದರ ರಕ್ಷಣೆ ಸರ್ಕಾರದ ಆದ್ಯತೆಯಲ್ಲವೇ? ಒಂದು ಸಮಾಧಿ ಉಳಿಸಿಕೊಳ್ಳುವುದಕ್ಕಾಗಿ ಈ ನಾಡಿನಲ್ಲಿ ಹೋರಾಟಗಳು ಆಗಬೇಕೆ? ಅಷ್ಟು ಅಂತಃಕರಣಹೀನ ವ್ಯವಸ್ಥೆಯಲ್ಲಿ ನಾವಿದ್ದೇವೆಯೇ?

ಶ್ರೀರಾಮಚಂದ್ರನ ವನವಾಸದ ಅವಧಿ ಹದಿನಾಲ್ಕು ವರ್ಷ. ಡಾ.ವಿಷ್ಣುವರ್ಧನ್ ಅವರು ನಮ್ಮನ್ನಗಲಿಯೂ ಹದಿನಾಲ್ಕು ವರ್ಷ. ಇನ್ನಾದರೂ ಶ್ರೀರಾಮನಿಗೆ ರಾಜ್ಯ ದಕ್ಕಿದಂತೆ, ಡಾ.ವಿಷ್ಣುವರ್ಧನ್ ಅವರಿಗೆ ಸಮಾಧಿಯ ನ್ಯಾಯ ದಕ್ಕಲಿ.

**– ವೀರಕಪುತ್ರ ಶ್ರೀನಿವಾಸ**

## ಸಬ್ಸಿಡಿ ವದಂತಿಗೆ ಕಿವಿಗೊಡದಿರಿ

**ಮೊದಲ ಪುಟದಿಂದ**
ಎಂಬ ವದಂತಿಗೆ ಕಿವಿಗೊಡದಿರಿ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಉಪ ನಿರ್ದೇಶಕ ಮಲ್ಲಿಕಾರ್ಜುನ ಅವರು ತಿಳಿಸಿದ್ದಾರೆ.
ಡಿ.31ರ ಒಳಗಾಗಿ ಗ್ಯಾಸ್ ಏಜೆನ್ಸಿಗಳಿಗೆ ಹೋಗಿ ಇ–ಕೈವೈಸಿ ಮಾಡಿಸಿದರೆ ಮಾತ್ರ ಸಬ್ಸಿಡಿ ಸಿಗುತ್ತದೆ ಹಾಗೂ ಸಿಲಿಂಡರ್ ಸರಬರಾಜು ಮಾಡಲಾಗುತ್ತದೆ ಎನ್ನುವ ವದಂತಿ ಮತ್ತು ಇ–ಕೈವೈಸಿ ಕಾರ್ಯಕ್ಕೆ ಹಣ ನೀಡಬೇಕೆಂಬ ವದಂತಿ ಸಾರ್ವಜನಿಕ ವಲಯದಲ್ಲಿ ಗೊಂದಲ ಸೃಷ್ಠಿಗೆ ಕಾರಣವಾಗಿರುತ್ತದೆ.ಜಿಲ್ಲೆಯಲ್ಲಿ ಅಡುಗೆ ಅನಿಲ ಸಂಪರ್ಕ ಹೊಂದಿರು ವವರು ಆಧಾರ್ ಬಯೋಮೆಟ್ರಿಕ್ ನೀಡಲು ಕೇಂದ್ರ ಸರ್ಕಾರವು ಯಾವುದೇ ರೀತಿಯ ಕೊನೆಯ ದಿನಾಂಕ ನಿಗದಿಪಡಿಸಿರುವುದಿಲ್ಲ.
ಜಿಲ್ಲೆಯ ಅಡುಗೆ ಅನಿಲ ಸಂಪರ್ಕ ಹೊಂದಿರುವ ಗ್ರಾಹಕರು ಅನಾವಶ್ಯಕ ಗೊಂದಲ ಅಥವಾ ತಪ್ಪು ಮಾಹಿತಿಯಿಂದ ಗ್ಯಾಸ್ ಏಜೆನ್ಸಿಗಳ ಬಳಿ ಸರತಿ ಸಾಲಿನಲ್ಲಿ ನಿಲ್ಲುವ ಅವಶ್ಯಕತೆ ಇರುವುದಿಲ್ಲ. ಉಜ್ವಲ ಯೋಜನೆಯಡಿ ಗ್ಯಾಸ್ ಸಂಪರ್ಕ ಹೊಂದಿರುವವರು ಆಧಾರ್ ಸಂಖ್ಯೆ ದಾಖಲಾತಿಯೊಂದಿಗೆ ಸಂಬಂಧಿಸಿದ ಗ್ಯಾಸ್ ಏಜೆನ್ಸಿಗೆ ತೆರಳಿ ಇ–ಕೈವೈಸಿ ನೀಡಬಹುದಾಗಿದೆ.
ಇ–ಕೈವೈಸಿ ಉಚಿತವಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾವುದೇ ಶುಲ್ಕ ನಿಗದಿಪಡಿಸಿಲ್ಲ. ಅಡುಗೆ ಅನಿಲ ಗ್ಯಾಸ್ ಬಳಕೆದಾರರು ಇದರ ಸದುಪಯೋಗ ಪಡಿಸಿಕೊಳ್ಳಬಹುದು.

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No. 978/2023**

Between: 1) Mehaboob Bee Wife of late Abdul Majeed Sab aged about 69 years, 2) Imtiyaz.H son of late Abdul Majeed Sab aged about 39 years 3) Riyaz Son of late Abdul Majeed Sab aged about 37 years 4) Umakousar Bee Daughter of late Abdul Majeed Sab aged about 35 years 5) Ummi Afsara Daughter late Abdul Majeed Sab aged about 33 years 6) Umakusar.H Daughter late Abdul Majeed Sab aged about 31 years

All are Muslims, agriculturists, R/o 8th Ward Ballari Camp Kottru Town and Kottru Taluk, Vijayanagara Dist. ...Petitioners
And The Chief Officer, Town Panchayath Kottru ...Respondent

**SUMMONS TO INRERESTRD PERGREAT GRANDPETITIONER NO.1,S HUSBAND PETITIONER NO.2 TO 5,S FATHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Petitioner No.1,s Husband petitioner No.2 to 5,s father by name Abdul Majeed sab S/o Late Imam Sab was died on 02/03/2007 at Kottru Town and Kottru Taluk Vijayanagara Dist. on the file of the civil Judge& JMFC at Kudligi, The Chief Officer Town Panchyati Kottru is the respondent. The interested per Petitioner No.1,s Husband petitioner No.2 to 5,s father are hereby summoned to appear in this court in per Petitioner No.1,s Husband petitioner No.2 to 5,s father or by pleader duly instructed and able to answer all material question relating to the above petition on 06/01/2024 at 11 A.M. and interested per Great grand Petitioner No.1,s Husband petitioner No.2 to 5,s father are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 11/11/2023

By Order of the court
Chief Ministerial officer
Civil Judge and J.M.F.C Kudligi

Doddamani Shivakuara
D.Chaitra
Advocate, Kudligi

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No.818/2023**

Between: 1) Talavara Nagappa s/o Late Talavara Basappa, aged about 60 years, Hindu, agriculturists, R/o Maruru Village in Kottru Taluk, Vijayanagara Dist. ...Petitioners
And
The Tahasildhar Kottru ...Respondent

**SUMMONS TO INRERESTRD PERGREAT GRANDFATHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Father by name Talavara Basappa S/o Late Talavara Dodda Chowdavva was died on 25/08/1998 at Marur village Kottru Taluk Vijayanagara Dist. on the file of the civil Judge& JMFC at Kudligi, The Tahasildhar Kottru is the respondent. The interested per father are hereby summoned to appear in this court in per father or by pleader duly instructed and able to answer all material question relating to the above petition on 04/01/2024 at 11 A.M. and interested per Great grandfather are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 07/12/2023

By Order of the court
Chief Ministerial officer
Civil Judge and J.M.F.C Kudligi

K.Muganna
Advocate, Kudligi

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No. 1292/2023**

Between:
1) Boraiah N.G s/o Govindappa, aged about 36 years, Hindu, agriculturists, R/o Yarrobayyanahatti Village in Kudligi Taluk, Vijayanagara Dist . ...Petitioners
And
The Tahasildhar Kudligi ..Respondent

**SUMMONS TO INRERESTRD PERGREAT GRANDFATHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Great grandfather by name Obaiah S/o Late Dasaiah was died on 14/08/1983 at Yarrobayyanahatti village Kudligi Taluk Vijayanagara Dist. on the file of the civil Judge& JMFC at Kudligi, The Tahasildhar Kudligi is the respondent. The interested per Great grandfather are hereby summoned to appear in this court in per Great grandfather or by pleader duly instructed and able to answer all material question relating to the above petition on 16/01/2024 at 11 A.M. and interested per Great grandfather are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 07/12/2023

By Order of the court
Chief Ministerial officer
Civil Judge and J.M.F.C Kudligi

Swaroopannda Naik.L
Advocate, Kudligi

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No. 1291/2023**

Between:
1) Mugappa s/o Doddabasappa, aged about 49 years, Hindu, agriculturists, R/o Jarmali Village in Kudligi Taluk, Vijayanagara Dist ...Petitioners
And
The Tahasildhar Kudligi ..Respondent

**SUMMONS TO INRERESTRD PERMOTHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Mother by name Rajamma W/o Late Dodda Basappa was died on 15/03/1982 at Jaramli village Kudligi Taluk Vijayanagara Dist. on the file of the civil Judge& JMFC at Kudligi, The Tahasildhar Kudligi is the respondent. The interested per Mother are hereby summoned to appear in this court in per Mother or by pleader duly instructed and able to answer all material question relating to the above petition on 16/01/2024 at 11 A.M. and interested per Mother are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte.
Given under my hand and seal of this Hon'ble Court on 07/12/2023

By Order of the court
Chief Ministerial officer
Civil Judge and J.M.F.C Kudligi

Swaroopannda Naik.L
Advocate, Kudligi

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No. 1318/2023**

Between: 1) Dasara Doddapp s/o Dasara marappa, aged about 45 years, 2) Dasara Marappa son of late Dasara marappa aged about 43 years All are Hindu, agriculturists, R/o Sooldahalli Village in Kudligi Taluk, Vijayanagara Dist. ...Petitioners
And
The Tahasildhar Kudligi ..Respondent

**SUMMONS TO INRERESTRD PERFATHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Father by name Dasara Marappa S/o Late Dasara Doddayya was died on 04/09/2017 at Sooladahalli village Kudligi Taluk Vijayanagara Dist. on the file of the civil Judge& JMFC at Kudligi, The Tahasildhar Kudligi is the respondent. The interested per Father are hereby summoned to appear in this court in per Father or by pleader duly instructed and able to answer all material question relating to the above petition on 10/01/2024 at 11 A.M. and interested per Father are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 01/12/2023.

By Order of the court
Chief Ministerial officer
Civil Judge and J.M.F.C Kudligi

Swaroopannda Naik.L
Advocate, Kudligi

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No. 1342/2023**

Between: 1) Smt.Chowdamma W/o Devendrappa, aged about 33 years,Hindu, agriculturists, R/o Thimmalapura Village in Kottur Taluk, Vijayanagara Dist. …Petitioners
And
The Tahasildhar Kottur ...Respondent

**SUMMONS TO INRERESTRD PERFATHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Father by name Dodda Choudappa S/o Late Moogappa was died on 06/10/1994 at Thimmlapura village Kottru Taluk Vijayanagara Dist. on the file of the civil Judge& JMFC at Kudligi, The Tahasildhar Kottru is the respondent. The interested per Father are hereby summoned to appear in this court in per Father or by pleader duly instructed and able to answer all material question relating to the above petition on 04/01/2024 at 11 A.M. and interested per Father are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte.

Given under my hand and seal of this Hon'ble Court on 07/12/2023.

By Order of the court
Chief Ministerial officer
Civil Judge and J.M.F.C Kudligi

Swaroopannda Naik.L
Advocate, Kudligi

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No. 1341/2023**

Between: 1) Sreekanthapurada Obayya son of Dasayya aged about 64 years,Hindu, agriculturists, R/o Arjunachinnanahalli Village Kudligi Taluk, Vijayanagara Dist.
… Petitioners And
The Tahasildhar Kudligi ...Respondent

**SUMMONS TO INRERESTRD PERBROTHER U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Brother by name Borayya S/o Dasayya was died on 06/12/1980 at Arjunachinnanahalli village Kudligi Taluk Vijayanagara Dist. on the file of the civil Judge & JMFC at Kudligi, The Tahasildhar Kudligi is the respondent. The interested per Brother are hereby summoned to appear in this court in per Brother or by pleader duly instructed and able to answer all material question relating to the above petition on 04/01/2024 at 11 A.M. and interested per Brother are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 11/12/2023.

By Order of the court
Chief Ministerial officer
Civil Judge and J.M.F.C Kudligi

Swaroopannda Naik.L
Advocate, Kudligi

ಹಂಪಿ ಟೈಮ್ಸ್
HAMPI TIMES

ಮೈಕ್ರೋ ನ್ಯೂಸ್

## ಪತ್ರಿಕಾ ವಿತರಕರಿಗೆ ಸೌಲಭ್ಯ: ಇ-ಶ್ರಮ್ ಪೋರ್ಟಲ್‌ನಲ್ಲಿ ನೋಂದಣಿಗೆ ಸೂಚನೆ

**ಹಂಪಿ ಟೈಮ್ಸ್ ಕೊಪ್ಪಳ**
ದಿನ ಪತ್ರಿಕೆಗಳನ್ನು ವಿತರಿಸುವ ಪತ್ರಿಕಾ ವಿತರಕರಿಗೆ ರಾಜ್ಯ ಸರ್ಕಾರ ಅಪಘಾತ ಪರಿಹಾರ ಹಾಗೂ ವೈದ್ಯಕೀಯ ಸೌಲಭ್ಯ ಜಾರಿ ಮಾಡಿದ್ದು, ಇ-ಶ್ರಮ್ ಪೋರ್ಟಲ್ ಮೂಲಕ ನೋಂದಣಿ ಮಾಡಿಕೊಳ್ಳುವಂತೆ ತಿಳಿಸಿದೆ.

ಫಲಾನುಭವಿಗಳು ಕರ್ನಾಟಕದ ನಿವಾಸಿಯಾಗಿರಬೇಕು. 18 ರಿಂದ 59 ವರ್ಷದೊಳಗಿನವರಾಗಿರಬೇಕು. ಆದಾಯ ತೆರಿಗೆ ಪಾವತಿಸುವವರಿಗೆ ಹಾಗೂ ಇ.ಎಸ್.ಐ ಫಲಾನುಭವಿಗಳಿಗೆ ಈ ಯೋಜನೆ ಅನ್ವಯವಾಗುವುದಿಲ್ಲ. ಅಪಘಾತದಿಂದ ಮರಣ ಹೊಂದಿದ್ದಲ್ಲಿ ವಿಮಾ ಪರಿಹಾರ ರೂ. 2 ಲಕ್ಷ, ಅಪಘಾತದಿಂದ ಸಂಪೂರ್ಣವಾಗಿ ಶಾಶ್ವತ ದುರ್ಬಲತೆ ಹೊಂದಿದ್ದಲ್ಲಿ ಗರಿಷ್ಠ ರೂ. 2 ಲಕ್ಷ, ಅಪಘಾತದ ಹಾಗೂ ಗಂಭೀರ ಅನಾರೋಗ್ಯದ ಸಂದರ್ಭದಲ್ಲಿ ಆಸ್ಪತ್ರೆ ವೆಚ್ಚ ಮರುಪಾವತಿ ರೂ. 1 ಲಕ್ಷ ವರೆಗೆ ಪರಿಹಾರ ದೊರೆಯಲಿದೆ. ಅರ್ಹ ಫಲಾನುಭವಿಗಳು ಇ-ಶ್ರಮ್ ಪೋರ್ಟಲ್‌ನಲ್ಲಿ ಹೆಸರು ನೋಂದಣಿ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಮಿಕ ನಿರೀಕ್ಷಕರ ಕಛೇರಿ/ ಕಾರ್ಮಿಕ ಅಧಿಕಾರಿಗಳವರ ಕಛೇರಿ, ಕೊಪ್ಪಳ ಇಲ್ಲಿಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿಗಳು ತಿಳಿಸಿದ್ದಾರೆ.

## ಅಗ್ನಿಪಥ್ ನೇಮಕಾತಿ ಲಿಖಿತ ಪರೀಕ್ಷೆಗೆ ತರಬೇತಿ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**
ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸಮರ್ಪಕ ಸೇವಾ ಸಮಿತಿ ಮತ್ತು ವಿಜಯೋನ್ನತಿ ಸ್ಪರ್ಧಾತ್ಮಕ ತರಬೇತಿ ಸಂಸ್ಥೆ, ಕೊಪ್ಪಳ ಇವರ ಸಹಯೋಗದೊಂದಿಗೆ ಭಾರತೀಯ ಸೇನೆಯ ಅಗ್ನಿಪಥ್ ಹುದ್ದೆಗೆ ಲಿಖಿತ ಪರೀಕ್ಷೆಗಾಗಿ ಉನ್ನತ ಮಟ್ಟದ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ಆಸಕ್ತ ಯುವಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ಕನಿಷ್ಠ 17.5 ವರ್ಷದಿಂದ ಗರಿಷ್ಠ 21 ವರ್ಷ ವಯೋಮಿತಿಯುಳ್ಳ ಯುವಕರಿಗೆ ಲಿಖಿತ ಪರೀಕ್ಷೆ ತರಬೇತಿಯನ್ನು ನೀಡಲಾಗುವುದು. ಜನವರಿ ಎರಡನೇ ವಾರದಿಂದ ತರಬೇತಿಯನ್ನು ಪ್ರಾರಂಭ ಮಾಡುತ್ತಿದ್ದು, ಒಟ್ಟು 60 ಯುವಕರಿಗೆ ಮಾತ್ರ ಅವಕಾಶವಿದೆ. ಮೊದಲು ಬರುವ ಯುವಕರಿಗೆ ಪ್ರಥಮಾದ್ಯತೆ ನೀಡಲಾಗುವುದು. ಒಂದು ವೇಳೆ ಹೆಚ್ಚಿನ ಯುವಕರು ನೋಂದಾಯಿಸಿದ್ದಲ್ಲಿ, ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ ಪ್ರಕ್ರಿಯೆ ಜರುಗಿಸಲಾಗುವುದು. ಆಸಕ್ತರು ಅರ್ಜಿಗಳನ್ನು ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ಕೊಪ್ಪಳ ಇಲ್ಲಿ ಪಡೆದು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಭಿಮೇಶ ಕುರಿ, ದೂ. ಸಂ: 9845858494 ಇವರನ್ನು ಸಂಪರ್ಕಿಸಬಹುದು ಎಂದು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಿ

**ಹಂಪಿ ಟೈಮ್ಸ್ ಕಂಪ್ಲಿ**
ಕಂಪ್ಲಿ ಪಟ್ಟಣದಲ್ಲಿ ವಿವಿಧೆಡೆ ವೃತ್ತ ಹಾಗೂ ಮಹನೀಯರ ಪುತ್ಥಳಿಗಳನ್ನು ಸ್ಥಾಪಿಸಿ ಅನಾವರಣಗೊಳಿಸಲು ಉದ್ದೇಶಿಸಲಾಗಿದ್ದು, ಸಾರ್ವಜನಿಕರು ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಬಹುದು ಎಂದು ಕಂಪ್ಲಿ ಪುರಸಭೆ ಮುಖ್ಯಾಧಿಕಾರಿ ಕೆ.ದುರುಗಣ್ಣ ಅವರು ತಿಳಿಸಿದ್ದಾರೆ. ಕಂಪ್ಲಿ ಪಟ್ಟಣದ ವಿವಿಧ ಪ್ರದೇಶಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ವೃತ್ತ, ಮಹರ್ಷಿ ವಾಲ್ಮೀಕಿ ವೃತ್ತ, ಕನಕದಾಸರ ವೃತ್ತ, ಬಸವೇಶ್ವರ ವೃತ್ತ ಮತ್ತು ಮೌಲಾನಾ ಅಬುಲ್ ಕಲಾಂ ಆಜಾದ್ ವೃತ್ತಗಳನ್ನು ನಿರ್ಮಿಸಿ, ಅವರ ಪುತ್ಥಳಿಯನ್ನು ಅನಾವರಣ ಮಾಡುವ ಕುರಿತು ಕಂಪ್ಲಿ ಶಾಸಕರು ಕೋರಿರುತ್ತಾರೆ.

ಕಂಪ್ಲಿ ಪಟ್ಟಣದ ವಿವಿಧ ಪ್ರದೇಶಗಳಲ್ಲಿ ವೃತ್ತಗಳನ್ನು ನಿರ್ಮಿಸಿ, ಮಹನೀಯರ ಪುತ್ಥಳಿಯನ್ನು ಅನಾವರಣ ಮಾಡುವ ಬಗ್ಗೆ ಯಾರಿಗಾದರೂ ಆಕ್ಷೇಪಣೆಗಳಿದ್ದಲ್ಲಿ ಲಿಖಿತ ಮತ್ತು ಪೂರಕ ದಾಖಲೆಗಳೊಂದಿಗೆ ಪ್ರಕಟಣೆಗೊಂಡ 30 ದಿನದೊಳಗಾಗಿ ಕಂಪ್ಲಿ ಪುರಸಭೆ ಕಚೇರಿಗೆ ಸಲ್ಲಿಸಬಹುದಾಗಿದೆ.

ಅವಧಿ ಮೀರಿ ಬಂದ ಮನವಿ ಹಾಗೂ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಮುಖ್ಯಾಧಿಕಾರಿ ಕೆ.ದುರುಗಣ್ಣ ತಿಳಿಸಿದ್ದಾರೆ.

# ಶ್ರಮಕ್ಕೆ ತಕ್ಕ ಪ್ರೋತ್ಸಾಹ ಧನ ನೀಡಿ

### ಆಶಾ ಕಾರ್ಯಕರ್ತೆಯರ ಸಂಘದಿಂದ ಶುಕ್ರವಾರ ಪ್ರತಿಭಟನೆ | ಡಿಎಚ್‌ಒಗೆ ಮನವಿ




**ಹಂಪಿ ಟೈಮ್ಸ್ ಹೊಸಪೇಟೆ**
ಶ್ರಮಕ್ಕೆ ತಕ್ಕ ಪ್ರೋತ್ಸಾಹ ಧನ, ಆರ್.ಸಿ.ಎಚ್ ಪೋರ್ಟಲ್‌ನಲ್ಲಿರುವ ಗೊಂದಲಗಳನ್ನು ನಿವಾರಣೆ, ಮಾಸಿಕ 15 ಸಾವಿರ ರೂ. ಪ್ರೋತ್ಸಾಹ ಧನ ನಿಗದಿ ಪಡಿಸಬೇಕು. ಅನ್ಯ ಕೆಲಸಗಳಿಂದ ಮುಕ್ತಿಗೊಳಿಸಬೇಕು ಎಂದು ಆಗ್ರಹಿಸಿ ಎಐಯುಟಿಯುಸಿ ಸಂಯೋಜಿತ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದಿಂದ ಶುಕ್ರವಾರ ಪ್ರತಿಭಟನೆ ನಡೆಸಿ ಆಗ್ರಹಿಸಿತು.

ನಗರದ ಪುನೀತ್ ರಾಜ್‌ಕುಮಾರ್ ಸರ್ಕಲ್‌ನಿಂದ ಜಿಲ್ಲಾ ಆರೋಗ್ಯಾಧಿಕಾರಿಗಳ ಕಚೇರಿಗೆ ಪ್ರತಿಭಟನೆ ನಡೆಸಿ, ಡಿಎಚ್‌ಒ ಡಾ.ಶಂಕರ್ ನಾಯ್ಕಗೆ ಮನವಿ ಸಲ್ಲಿಸಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾ ಅಧ್ಯಕ್ಷರಾದ ಡಾ.ಪ್ರಮೋದ್.ಎನ್ ಮಾತನಾಡಿದರು. ಜನರ ಆರೋಗ್ಯ ರಕ್ಷಣೆಗಾಗಿ ಆಶಾ ಕಾರ್ಯಕರ್ತೆಯರು ಹಗಲಿರುಳು ದುಡಿಯುತ್ತಿದ್ದಾರೆ. ಕೊರಾನಾ ಸಂದರ್ಭದಲ್ಲಿ ತಮ್ಮ ಪ್ರಾಣ ಪಣಕ್ಕಿಟ್ಟು ದುಡಿದ ಆಶಾಗಳಿಗೆ ಸರ್ಕಾರ, ಬಜೆಟ್‌ನಲ್ಲಿ 1000 ರೂ. ಹೆಚ್ಚಿಸಿತ್ತಾದರೂ, ಅದನ್ನು ಕಾರ್ಯಗತಗೊಳಿಸಲಿಲ್ಲ. ಕಾಂಗ್ರೆಸ್ ಚುನಾವಣಾ ಸಂದರ್ಭದಲ್ಲಿ ಆಶಾಗಳ ಗೌರವಧನವನ್ನು 5000 ರೂ. ದಿಂದ 8000 ರೂ. ಗೆ ಏರಿಸುವ ಗ್ಯಾರಂಟಿ ನೀಡಿತ್ತಾದರೂ, ಈ ವರೆಗೆ ಈಡೇರಿಸಿಲ್ಲ. ಅಲ್ಲದೇ ಆರ್.ಸಿ.ಎಚ್ ಪೋರ್ಟಲ್ ಸಮಸ್ಯೆಯಿಂದಾಗಿ ಸಾವಿರಾರು ರೂ. ಕಳೆದುಕೊಳ್ಳುವಂತಾಗಿದೆ.

ಅನಗತ್ಯ ಸರ್ವೆಗಳು, ಪರೀಕ್ಷೆ, ಚುನಾವಣೆ, ಇನ್ನಿತರ ಕಾರ್ಯಕ್ರಮಗಳಿಗೆ ಆಶಾಗಳನ್ನು ಬಳಕೆ ಮಾಡಿಕೊಳ್ಳುವುದರಿಂದ ತಾಯಿ-ಶಿಶುವಿನ ಆರೋಗ್ಯಕ್ಕೆ ಸಂಬಂಧಪಟ್ಟ ಕೆಲಸಗಳಿಗೆ ಹಿನ್ನಡೆಯಾಗುತ್ತಿವೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಎಐಯುಟಿಯುಸಿ ಜಿಲ್ಲಾ ಅಧ್ಯಕ್ಷ ಎ.ದೇವದಾಸ್, ಸಂಘದ ಕಾರ್ಯದರ್ಶಿ ಗೌರಮ್ಮ ಕೆ.ಎಸ್, ಪ್ರಮುಖರಾದ ಗೀತಾ, ವೀರಮ್ಮ, ಮಂಗಳಾ, ಮಹೇಶ್ವರಿ, ಅನ್ನಪೂರ್ಣ ಪಾಲ್ಗೊಂಡಿದ್ದರು.

## ಭಾರತೀಯ ಸಂಸ್ಕೃತಿ ಶ್ರೀಮಂತ

### ವಿದ್ಯಾರಣ್ಯ ಭಾರತಿ ಸ್ವಾಮೀಜಿ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**
ಭಾರತೀಯ ಸಂಸ್ಕೃತಿ, ಸಾಹಿತ್ಯ, ಸಂಗೀತವನ್ನು ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕು. ಭಾರತೀಯ ಸಂಸ್ಕೃತಿಯನ್ನು ಜಗತ್ತೆ ಮೆಚ್ಚಿಕೊಂಡು ಅನುಸರಿಸಲು ಮುಂದಾಗುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹಂಪಿ ವಿದ್ಯಾರಣ್ಯ ಭಾರತಿ ಸ್ವಾಮೀಜಿ ಹೇಳಿದರು.

ಹಂಪಿ ಫಲಪೂಜಾ ಪ್ರಯುಕ್ತ ಕಡ್ಡಿರಾಂಪುರದ ಶ್ರೀಮರಿದೇವ ಸಂಗೀತ ಸಾಂಸ್ಕೃತಿ ಕಲಾವೃಂದವು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಸಹಕಾರದೊಂದಿಗೆ ಗುರುವಾರ ಹಮ್ಮಿಕೊಂಡಿದ್ದ 26ನೇ ವರ್ಷದ ಭಕ್ತಿಭಾವನಾ ಸಾಂಸ್ಕೃತಿ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಮಾತನಾಡಿದರು. ಭಾವ, ರಾಘ, ತಾಳದಿಂದ ಕೂಡಿದೆ ಭಾರತ. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈಯಲು ಭಾರತದಲ್ಲಿ ಹಲವು ಅವಕಾಶಗಳಿವೆ. ನಿರಂತರ ಪರಿಶ್ರಮದಿಂದ ಅಸಾಧ್ಯವಾದದ್ದನ್ನು ಸಾಧಿಸಬಹುದು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ ಕೆ.ರಂಗಣ್ಣವರ್ ಮಾತನಾಡಿ, ಹಂಪಿ ಎಂದರೆ ಸಂಗೀತ, ಕಲೆ, ಸಾಂಸ್ಕೃತಿ ಶ್ರೀಮಂತಿಕೆಯಿಂದ ಪ್ರಜ್ವಲಿಸಿದ ನಾಡು. ಹಂಪಿಗೆ ಬಂದಂತಹ ಭಕ್ತರು ದೇಶವಿದೇಶದ ಪ್ರವಾಸಿಗರಿಗೂ ನಮ್ಮ ನಾಡು ನುಡಿಯ, ಸಂಗೀತ ಸಂಸ್ಕೃತಿ ಇತಿಹಾಸವನ್ನು ಪರಿಚಯಿಸುತ್ತಿರುವುದು ಕಲಾವೃಂದಕ್ಕೂ, ನಮ್ಮ ಕನ್ನಡ ಸಂಸ್ಕೃತಿ ಇಲಾಖೆಗೂ ಸಾರ್ಥಕ ಭಾವನೆ ಮೂಡುತ್ತದೆ ಎಂದರು.

ಹೊಸಪೇಟೆಯ ಚಿಂತಾಮಣಿ ಮಠದ ಶ್ರೀ ಶಿವಾನಂದ ಭಾರತಿ ಸ್ವಾಮೀಜಿ, ಇದ್ದರು. ಹಂಪಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ರಜಿನಿ.ಕೆ.ಷಣ್ಮುಕ ಗೌಡ ಅಧ್ಯಕ್ಷತೆ ವಹಿಸಿದ್ದರು. ದೇವಸ್ಥಾನದ ಇಒ ಹನುಮಂತಪ್ಪ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗಂಗಾಧರ, ಕಲಾವೃಂದದ ಅಂಗಡಿ ವಾಮದೇವ ಸಂಗೀತ ಪ್ರಾಧ್ಯಾಪಕರಾದ ವೀರೇಶ ಹಿಟ್ನಾಳ್, ಹಂಪಿಯ ಮೋಹನ್ ಚಿಕ್‌ಭಟ್ ಜೋಷಿ, ಗ್ರಾಪಂ ಉಪಾಧ್ಯಕ್ಷ ಹನುಮಂತಪ್ಪ ಭಾಗವಹಿಸಿದ್ದರು.

ಕಲಾವಿದರಿಂದ ಹಿಂದೂಸ್ಥಾನಿ ಸಂಗೀತ, ತತ್ವಪದ, ಭಕ್ತಿ ಗೀತೆಗಳು , ಭರತನಾಟ್ಯ, ಸಮೂಹ ನೃತ್ಯ, ಜಾನಪದ ನೃತ್ಯ ಸಮೂಹ ನೃತ್ಯ, ಸುಗಮ ಸಂಗೀತ, ಜಾನಪದ ಗೀತೆಗಳ ಕಾರ್ಯಕ್ರಮಗಳು ತಡರಾತ್ರಿವರೆಗೂ ಕಾರ್ಯಕ್ರಮಗಳು ಜರುಗಿದವು.

## ರಾಷ್ಟ್ರಕವಿ ಕುವೆಂಪುಗೆ ಗೌರವ ಸಮರ್ಪಣೆ



**ಹಂಪಿ ಟೈಮ್ಸ್ ಹೊಸಪೇಟೆ**
ರಾಷ್ಟ್ರಕವಿ, ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಮಹಾನ್ ಚೇತನ ಕುವೆಂಪು ರವರ ಜನ್ಮದಿನಾರಣೆಯನ್ನು ವಿಶ್ವ ಮಾನವ ದಿನಾಚರಣೆಯನ್ನಾಗಿ ಆಚರಣೆ ಮಾಡಲಾಗುತ್ತಿದ್ದು, ಶುಕ್ರವಾರ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪುಷ್ಪಾರ್ಚನೆ ಮೂಲಕ ಕುವೆಂಪು ಅವರಿಗೆ ಗೌರವ ಸಮರ್ಪಿಸಲಾಯಿತು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ., ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ್ ಕೋಸಂಬೆ, ಅಪರ ಜಿಲ್ಲಾಧಿಕಾರಿ ಅನುರಾಧ ಜಿ. ಹಾಗೂ ಇತರರು ಸೇರಿ ಕುವೆಂಪು ರವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ಕೊಟ್ಟೂರಲ್ಲಿ ವಿಶ್ವಮಾನವ ಸ್ಮರಣೆ




**ಹಂಪಿ ಟೈಮ್ಸ್ ಕೊಟ್ಟೂರು**
ಕೊಟ್ಟೂರು ತಾಲೂಕು ಕಚೇರಿಯಲ್ಲಿ ರಾಷ್ಟ್ರಕವಿ ಕುವೆಂಪುರವರ ಜನ್ಮದಿನಾಚರಣೆಯ ಪ್ರಯುಕ್ತ ಶುಕ್ರವಾರ "ವಿಶ್ವಮಾನವ ದಿನಾಚರಣೆ" ಆಚರಿಸಲಾಯಿತು. ತಾಲೂಕು ಕಚೇರಿ ಮಹಾತ್ಮಗಾಂಧೀಜಿ ಸಭಾಂಗಣದಲ್ಲಿ ಕುವೆಂಪುರವರ ಭಾವಚಿತ್ರಕ್ಕೆ ಅಮರೇಶ್.ಜಿ ಕೆ ತಹಶಿಲ್ದಾರರು ಪುಷ್ಪಾರ್ಚನೆ ಮಾಡಿ ನಮಸ್ಕರಿಸಿದರು. ನಂತರ, ಕನ್ನಡ ಸಾಹಿತ್ಯಕ್ಕೆ ಅವರು ಕೊಟ್ಟ ಕೊಡುಗೆ ಹಾಗೂ ಮನುಕುಲದ ಒಳಿತಿಗೆ ಶ್ರಮಿಸಿದ ಅವರ ಕೊಡುಗೆಯನ್ನು ಸ್ಮರಿಸಿದರು. ಈ ಸಂದರ್ಭದಲ್ಲಿ ಪ್ರಭಾರೆ ಗ್ರೇಡ್-2 ತಹಶೀಲ್ದಾರರು ಲೀಲಾ ಎಸ್, ಶಿರಸ್ತೇದಾರರು ಅನ್ನದಾನೇಶ ಬಿ ಪತ್ತಾರ, ಕಂದಾಯ ಇಲಾಖೆ ಹಾಗೂ ಭೂಮಾಪನ ಇಲಾಖೆಯ ಸಿಬ್ಬಂದಿ ಹಾಜರಿದ್ದರು.

## ಅಡುಗೆ ಮನೆಯಲ್ಲಿ ಸಿಲಿಂಡರ್ ಸ್ಫೋಟ

**ಹಂಪಿ ಟೈಮ್ಸ್ ಹರಪನಹಳ್ಳಿ**
ಪಟ್ಟಣದ ಅಕ್ಷಯ ಬಡಾವಣೆಯಲ್ಲಿ ಅಡುಗೆ ಅನಿಲ ಸ್ಫೋಟಗೊಂಡು ಘಟನೆ ನಡೆದಿದೆ. ವಾಸವಿರುವ ವೇದ, ಅವರ ಮಕ್ಕಳಾದ ನಿಶಾಂತ್, ಆವಂತಿಕ ಅಪಾಯದಿಂದ ಪಾರಾಗಿದ್ದಾರೆ.



ಗುರುವಾರ ಸಂಜೆ 6 ಗಂಟೆಯ ಸಮಯದಲ್ಲಿ ಅಡುಗೆ ಮನೆಯಲ್ಲಿದ್ದ ಸಿಲೆಂಡರ್ ಸೋರಿಕೆ ಆಗಿದೆ. ಸೋರಿಕೆ ತಡೆಯಲು ವೇದ ಮುಂದಾಗಿದ್ದು, ನಿಯಂತ್ರಣಕ್ಕೆ ಬಾರದಿದ್ದಾಗ ತಮ್ಮ ಇಬ್ಬರು ಮಕ್ಕಳನ್ನು ಎತ್ತಿಕೊಂಡು ಹೊರಬರುತ್ತಿದ್ದಂತೆ ಭಾರಿ ಪ್ರಮಾಣದ ಸದ್ದು ಕೇಳಿಸಿತು. ಅಡುಗೆ ಕೋಣೆಯಲ್ಲಿ ಬೆಂಕಿಯು ಹೊತ್ತಿಕೊಂಡಿದೆ ಎಂದು ಪ್ರತ್ಯಕ್ಷದರ್ಶಿ ನಿವಾಸಿಗಳು ತಿಳಿಸಿದರು.

ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ಠಾಣೆ ಸಿಬ್ಬಂದಿ ಬೆಂಕಿ ನಂದಿಸಿ, ಸುರಕ್ಷಿತವಾಗಿ ಸಿಲಿಂಡರ್ ಹೊರಗಡೆ ತಂದು ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಸ್ಫೋಟದ ರಭಸಕ್ಕೆ ಮನೆಯ ಕಿಟಕಿ, ಬಾಗಿಲು ಮುರಿದು, ಫ್ರಿಜ್, ಅಡುಗೆ ಸಾಮಾಗ್ರಿ, ಧವಸ ಧಾನ್ಯಗಳು ಸುಟ್ಟಿವೆ. ಅನಿಲ ಸೋರಿಕೆ ವೇಳೆ ಗೃಹಿಣಿ ವೇದ ತೆಗೆದುಕೊಂಡಿರುವ ನಿರ್ಧಾರದಿಂದ ಮೂರು ಜೀವಗಳು ಉಳಿದಿವೆ ಎಂದು ಅಧಿಕಾರಿ ವೀರೇಶ್ ಹೇಳಿದರು.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA